# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ

## ಮೈಸೂರು





# 2019-20ನೇ ಸಾಲಿನ ಪರಿಷ್ಕೃತ ಆಯ-ವ್ಯಯ
# ಮತ್ತು
# 2020-21ನೇ ಸಾಲಿನ ಅಂದಾಜು ಆಯ-ವ್ಯಯ

# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

**ಶ್ರೀ ಅಭಿರಾಮ್ ಜಿ ಶಂಕರ್,** ಐ.ಎ.ಎಸ್.
ಮಾನ್ಯ ಜಿಲ್ಲಾಧಿಕಾರಿಗಳು ಮತ್ತು
ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

## ಸನ್ಮಾನ್ಯ ಸದಸ್ಯರುಗಳು

**ಶ್ರೀ ಜಿ.ಟಿ.ದೇವೇಗೌಡ,** ವಿಧಾನ ಸಭಾ ಸದಸ್ಯರು, ಮೈಸೂರು.

**ಶ್ರೀ ತನ್ವೀರ್ ಸೇಠ್,** ವಿಧಾನ ಸಭಾ ಸದಸ್ಯರು, ಮೈಸೂರು.

**ಶ್ರೀ ಮರಿತಿಬ್ಬೇಗೌಡ,** ವಿಧಾನ ಪರಿಷತ್ ಸದಸ್ಯರು, ಮೈಸೂರು.

**ಶ್ರೀ ಸಂದೇಶ್ ನಾಗರಾಜು,** ವಿಧಾನ ಪರಿಷತ್ ಸದಸ್ಯರು, ಮೈಸೂರು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ,** ವಿಧಾನ ಪರಿಷತ್ ಸದಸ್ಯರು, ಮೈಸೂರು.

**ಶ್ರೀ ಎಸ್.ಎ.ರಾಮದಾಸ್,** ವಿಧಾನ ಸಭಾ ಸದಸ್ಯರು, ಮೈಸೂರು.

**ಶ್ರೀ ಕೆ.ವಿ.ನಾರಾಯಣ ಸ್ವಾಮಿ,** ವಿಧಾನ ಪರಿಷತ್ ಸದಸ್ಯರು, ಮೈಸೂರು.

**ಶ್ರೀ ಎಲ್.ನಾಗೇಂದ್ರ,** ವಿಧಾನ ಸಭಾ ಸದಸ್ಯರು, ಮೈಸೂರು.

**ಶ್ರೀ ಆರ್.ಧರ್ಮಸೇನ,** ವಿಧಾನ ಪರಿಷತ್ ಸದಸ್ಯರು, ಮೈಸೂರು.

**ಶ್ರೀ ರವೀಂದ್ರ ಶ್ರೀಕಂಠಯ್ಯ,** ವಿಧಾನ ಸಭಾ ಸದಸ್ಯರು, ಶ್ರೀರಂಗಪಟ್ಟಣ.

**ಶ್ರೀ ಹರ್ಷವರ್ಧನ.ಬಿ ,** ವಿಧಾನ ಸಭಾ ಸದಸ್ಯರು, ನಂಜನಗೂಡು.

**ಡಾ. ಯತೀಂದ್ರ ಸಿದ್ಧರಾಮಯ್ಯ,** ವಿಧಾನ ಸಭಾ ಸದಸ್ಯರು, ವರುಣಾ ಕ್ಷೇತ್ರ, ಮೈಸೂರು.

**ಶ್ರೀ ಎಸ್.ಬಿ.ಎಂ. ಮಂಜು,** ನಗರಪಾಲಿಕೆ ಪ್ರತಿನಿಧಿ ಸದಸ್ಯರು, ಮೈಸೂರು.

**ಶ್ರೀ ಪಿ.ಎಸ್.ಕಾಂತರಾಜು,** ಕೆ.ಎ.ಎಸ್., ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

**ಡಾ|| ಚಂದ್ರಗುಪ್ತಾ,** ಐ.ಪಿ.ಎಸ್., ಪೊಲೀಸ್ ಆಯುಕ್ತರು, ಮೈಸೂರು ನಗರ, ಮೈಸೂರು.

**ಶ್ರೀ ಗುರುದತ್ತ ಹೆಗ್ಗಡೆ,** ಐ.ಎ.ಎಸ್., ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.

**ಶ್ರೀ ಬಿ.ಎನ್.ಗಿರೀಶ್,** ನಗರ ಯೋಜನಾ ಸದಸ್ಯರು, ಮೈ.ನ.ಪ್ರಾ., ಮೈಸೂರು.

**ಶ್ರೀ ಶಂಕರ್,** ಅಭಿಯಂತ ಸದಸ್ಯರು, ಮೈ.ನ.ಪ್ರಾ., ಮೈಸೂರು.

**ಶ್ರೀ ಕೆ.ಎಂ.ಮುನಿಗೋಪಾಲರಾಜು,** ಅಧೀಕ್ಷಕ ಅಭಿಯಂತರು,(ವಿ) ನಗರ ಕಾಮಗಾರಿ ವೃತ್ತ, ಚಾವಿಸನಿನಿ, ಕುವೆಂಪುನಗರ, ಮೈಸೂರು.

**ಶ್ರೀ ಎನ್.ಪ್ರಸನ್ನ ಮೂರ್ತಿ,** ಕಾರ್ಯಪಾಲಕ ಅಭಿಯಂತರು, ಕ.ನ.ನೀ.ಸ.ಮತ್ತು ಒ.ಚ.ಮಂಡಳಿ, ಮೈಸೂರು.

**ಶ್ರೀ ಪಿ.ಎಸ್. ಕಾಂತರಾಜ್** ಕೆ.ಎ.ಎಸ್.
ಆಯುಕ್ತರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ,
ಮೈಸೂರು.

**ಶ್ರೀ ಅಭಿರಾಮ್ ಜಿ ಶಂಕರ್,** ಐ.ಎ.ಎಸ್.
ಮಾನ್ಯ ಜಿಲ್ಲಾಧಿಕಾರಿಗಳು ಮತ್ತು
ಅಧ್ಯಕ್ಷರು
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

## ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರುಗಳೆ, ಅಧಿಕಾರಿ ವರ್ಗದವರೆ ಹಾಗೂ ಮಾಧ್ಯಮ ಮಿತ್ರರೇ

ರಾಷ್ಟ್ರದಲ್ಲಿ ಪ್ರಥಮವಾಗಿ 1904ರಲ್ಲಿ ಸ್ಥಾಪಿತವಾದ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು 1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯನ್ವಯ ಅಂದಿನ "ಮೈಸೂರು ನಗರ ಯೋಜನಾ ಪ್ರಾಧಿಕಾರ" ದೊಂದಿಗೆ ವಿಲೀನಗೊಂಡು 1988ರ ಮೇ16ರಂದು "ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ" ವಾಗಿ ಅಸ್ತಿತ್ವಕ್ಕೆ ಬಂದಿದೆ.

ಮೈಸೂರೆಂದರೆ ಕೇವಲ ಅದೊಂದು ಊರಲ್ಲ. ಊರಿನ ಹೆಸರಿನಲ್ಲಿರುವ ರೋಮಾಂಚನ. ಚಿಕ್ಕವರಿಂದ ವಯೋವೃದ್ಧರವರೆಗೆ, ಭರತಖಂಡದ ಪ್ರಜೆಗಳಿಂದ ಹಿಡಿದು ವಿದೇಶಿ ಪ್ರಜೆಗಳವರೆಗೆ ವಿಶ್ವದ ಭೂಪಟದಲ್ಲಿ ಒಮ್ಮೆಯಾದರೂ ಕಣ್ತುಂಬಿಸಿಕೊಳ್ಳಬೇಕೆಂಬ ಹಂಬಲ ಹುಟ್ಟಿಸುವ ಊರು ಮೈಸೂರು. ಅದು ನಮ್ಮ ನಿಮ್ಮೆಲ್ಲರ ತವರು. ಅದೇ ಮೈಸೂರಿಗರ ಅಭಿಮಾನ, ಹೆಮ್ಮೆ. ಇಂಥಾ ಸ್ವಚ್ಛ ಸುಂದರ ಊರಿಗೆ ಬಹುದೊಡ್ಡ ಸಾಂಸ್ಕೃತಿಕ ಅನನ್ಯತೆಯಿದೆ. ಹಾಗಾಗಿಯೇ ಇದನ್ನು ವಿಶ್ವದ ಸಾಂಸ್ಕೃತಿಕ ಮಹಾದ್ವಾರ ಎಂದು ಕರೆಯಲಾಗಿದೆ.

ಐತಿಹಾಸಿಕ, ಸಾಂಸ್ಕೃತಿಕ, ಶೈಕ್ಷಣಿಕ. ಪಾರಂಪರಿಕತೆಯ ವಿಶಿಷ್ಟ ವಿಶೇಷತೆಗಳನ್ನು ಒಳಗೊಂಡ ಸುಂದರ ಪ್ರವಾಸಿ ಕೇಂದ್ರವಾಗಿ ಸಾಂಸ್ಕೃತಿಕ ರಾಜಧಾನಿ ಎಂದೇ ಹೆಸರುವಾಸಿ ಆಗಿರುವ ಮೈಸೂರು ನಗರವು ಅತೀ ವೇಗದಲ್ಲಿ ಯೋಜನಾ ಬದ್ಧವಾಗಿ ಬೆಳೆಯುತ್ತಿದೆ. ಅಂತೆಯೇ, ದಿನೇ ದಿನೇ ನಗರದ ಜನರ ಬಯಕೆಗಳು ಹಾಗೂ ನಿರೀಕ್ಷೆಗಳು ಸಹ ಹೆಚ್ಚಾಗುತ್ತಿದೆ. ಈ ದಿಸೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾ, ಆಡಳಿತ ಸುಧಾರಣೆಗೆ ಕಟ್ಟುನಿಟ್ಟಿನ ಕ್ರಮ ಜರುಗಿಸುವಲ್ಲಿ ಸರ್ವ ಪ್ರಯತ್ನವನ್ನು ಮಾಡುತ್ತಿದೆ. ಅಲ್ಲದೆ ನಗರದ ಸರ್ವಾಂಗೀಣ ಮತ್ತು ಸಮರ್ಪಕ ಅಭಿವೃದ್ಧಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ತನ್ನದೇ ಆದ ಛಾಪನ್ನು ಮೂಡಿಸಿದೆ.

ಈ ರೀತಿಯ ಹೆಗ್ಗಳಿಕೆಯನ್ನು ಪಡೆದಿರುವ ನಮ್ಮ ಮೈಸೂರು ಇಂದಿಗೂ ತನ್ನ ವೈಭವವನ್ನು ಉಳಿಸಿಕೊಂಡು ಬಂದಿದ್ದು, ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿ, ಪರಿಸರ, ಪ್ರವಾಸೋದ್ಯಮ, ಶಿಕ್ಷಣ ಇತ್ಯಾದಿ ಸೃಜನಶೀಲ ದೃಷ್ಟಿಗಳಿಂದ ತನ್ನ ಮಹತ್ವವನ್ನು ವೃದ್ಧಿಸಿಕೊಂಡು ಸಾಗುತ್ತಿದೆ.

ಮೈಸೂರು ನಗರವು ರಾಜ್ಯದ ರಾಜಧಾನಿ ಬೆಂಗಳೂರಿನ ನಂತರದ ದೊಡ್ಡ ನಗರವಾಗಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ರಾಜ್ಯದಲ್ಲಿಯೇ ಮಾದರಿ ಪ್ರಾಧಿಕಾರವೆಂಬ ಹೆಸರು ಪಡೆದಿದೆ. ತನ್ನ ಯೋಜನಾಬದ್ಧ ಬೆಳವಣಿಗೆಯಿಂದಾಗಿ ಹಾಗೂ ಉತ್ತಮ ಗುಣಮಟ್ಟದ ಜೀವನ ನಡೆಸಲು ಅವಶ್ಯವಿರುವ ಪೋಷಕಯುಕ್ತ, ಸಮರ್ಥನೀಯ ಮೂಲಭೂತ ನಾಗರಿಕ ಸೌಲಭ್ಯಗಳ ಲಭ್ಯತೆಯಿಂದಾಗಿ ಇಂದು ಮೈಸೂರು ನಗರ ಹೆಸರುವಾಸಿಯಾಗಿದೆ.

ಮೈಸೂರು ನಗರವು ಈ ರೀತಿ ಉತ್ತಮ ಬೆಳವಣಿಗೆ ಕಾಣಲು ಹಿಂದಿನ ಮೈಸೂರು ಮಹಾರಾಜರುಗಳು, ಪ್ರಮುಖ ಪಾತ್ರ ವಹಿಸಿದ್ದು, ಅವರ ಉತ್ತಮ, ಪ್ರಗತಿಪರ, ಶ್ರದ್ಧಾಶಕ್ತಿಯುಳ್ಳ ಅವರ ಗಂಭೀರ ಚಿಂತನೆ, ಮುಂದಾಲೋಚನೆ, ಪೋಷಣೆ ಅತಿ ಮಹತ್ವದ್ದಾಗಿವೆ. ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಅವರೊಂದಿಗೆ ಹೆಜ್ಜೆಹಾಕಿದ ದಿವಾನರುಗಳಾದ ಶ್ರೀ ದಿವಾನ್ ಪೂರ್ಣಯ್ಯ, ಸರ್ ಎಂ ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಮತ್ತು ಶ್ರೀ ಎನ್ ಮಾಧವರಾವ್, ಅವರುಗಳು ಸಲ್ಲಿಸಿದ ನಿಸ್ವಾರ್ಥ ಸೇವೆಯನ್ನು ದಾಖಲಿಸುವುದು ಹಾಗೂ ಗೌರವ ಸಮರ್ಪಿಸುವುದರ ಜೊತೆಗೆ ಅಂದಿನ ವಿಶ್ವಸ್ಥ ಮಂಡಳಿಯನ್ನು ಮುನ್ನಡೆಸಿದ ಅಧ್ಯಕ್ಷರುಗಳು, ನಂತರದ ಪ್ರಾಧಿಕಾರದ ಅಧ್ಯಕ್ಷರುಗಳು, ಸದಸ್ಯರುಗಳು, ಆಯುಕ್ತರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸೇವೆಯನ್ನು ಸ್ಮರಿಸುವುದು ಆದ್ಯ ಕರ್ತವ್ಯವಾಗಿರುತ್ತದೆ.

2020–21ನೇ ಸಾಲಿಗಾಗಿ ರೂಪಿಸಿಕೊಂಡಿರುವ ಯೋಜನೆಗಳು ಹಾಗೂ ಅದರ ಅಂದಾಜು ಆಯ–ವ್ಯಯಗಳು ನಗರದ ಅಭಿವೃದ್ಧಿ ಕುರಿತು ಆಶಯಗಳನ್ನು ಪ್ರತಿಬಿಂಬಿಸುತ್ತವೆ. ಪ್ರಾಧಿಕಾರದ ಗುರುತರವಾದ ಮೈಸೂರಿನ ಸಮಸ್ತ ನಾಗರೀಕರ ಒತ್ತಾಸೆಗಳಿಗೆ ಇಂಬುಕೊಡುವಂತೆ ರೂಪಿತವಾಗಿರುವ 2020–21ರ ಆಯವ್ಯಯದ ವಿವರಗಳನ್ನು ತಮ್ಮ ಮುಂದೆ ಮಂಡಿಸಲು ಹರ್ಷಿತನಾಗಿದ್ದೇನೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 43ರ ಅನ್ವಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯವ್ಯಯವನ್ನು ಮಾನ್ಯ ಕರ್ನಾಟಕ ಸರ್ಕಾರ ನಗರಾಭಿವದ್ಧಿ ಇಲಾಖೆಯ ಸುತ್ತೋಲೆ ಸಂಖ್ಯೆ. UDD/4/TTP/2019, ದಿನಾಂಕ 01.03.2019ರನ್ವಯ ಸಿದ್ದಪಡಿಸಲಾಗಿದೆ.

## GOVERNMENT OF KARNATAKA

**No.UDD 4 TTP 2019**

**Karnataka Government Secretariat**
**Vikasa Soudha**
**Bengaluru**
**Dated .0103.2019.**

## CIRCULAR

**Sub :- Guidelines regarding utilization of funds generated in Urban Development Authorities under various heads.**

-----

To ensure proper financial administration and to effectively utilize the financial resources of the Development Authorities to meet the objective of the KUDA Act and KTCP Act, in exercise of powers conferred under Section 65 of the Karnataka Urban

Development Authorities Act, 1987 direction is hereby issued to all Urban Development Authorities constituted under KUDA Act to follow the following guidelines strictly without fail.

The Authorities shall maintain funds separately as directed / explained below and deposit the amount generated to the respective funds as mentioned below and shall utilize strictly for the purpose which it is mentioned in the head of said funds.

### I. Fund: General Administration and master plan:

#### 1. Source:

I. Section 18 (1) fees and related Rules and guidelines

II. Supervision charges

III. 25% of the Development Fund 2

IV. Interest generated from (i) to (iii) above

#### 2. Utilisation:

I. General office administration and capacity building Office site purchase, building construction and maintenance.

II. Master Plan preparation and revision including studies and surveys.

III. Junction improvement schemes.

IV. Development of Master Plan roads including land acquisition.

V. Undertaking the first layout development scheme.

VI. Studies and surveys related to taking up any schemes.

### II. Fund: Lake Rejuvenation

#### 1. Source:

I. Lake rejuvenation cess collected under section 18 (1-A) and related Rules and guidelines.

II. Interest generated from above (i)

#### 2. Utilisation :

For the purpose of development and rejuvenation of existing water bodies and formation of water bodies, rejuvenation of extinct kalyanis and public wells within the local planning area limits

### III. Fund: Fees collected in lieu of Park and Open Space

**1. Source:**

I. Funds collected in lieu of Park and Open Spaces as per Government Notification No.UDD 522 MyAaPra 2005, Dated.10.03.2006

II. Presently, if any Development Authority is permitted to collect the fees in lieu of Park and Open Space.

III. Interest generated from (i) and (iii) above

**2. Utilisation :**

For acquiring lands reserved for Park and Open Space in the Master Plan.

### IV .FUND: Slum development

**1. Source:**

I. Slum cess collected as per Section 18-A and related Rules and guidelines.

II. Interest generated from (i) above

**2. Utilisation :**

I. As per Government Order No.UDD 812 MIB 1995, Dated.15.06.1996 and corrigendum No.UDD 912 MIB 1995, Dated. 08.07.1996, 70% shall be transferred to Slum Board.

II. Remaining 30% shall be utilized for the improvement of the notified slums in consultation with the slum board and concerned urban local body.

### V.FUND: Development Fund-1

**1. Source:**

I. Amount generated by allotment of sites in a layout developed by UDAs.

II. Amount generated by auction of commercial and corner sites in the layout developed by Development Authorities.

III. Amount generated by allotment/auction of house/plots/units in a group housing scheme (in a vertical development scheme)

IV. Amount generated by allotment of CA sites in the layout developed by the UDA.

V. 25% of the Development Fund 2

VI. Interest generated from (i) to (v) above.

**2. Utilisation :**

I. Study and surveys related to taking up layout development scheme.

II. To take up new layout development schemes including of land acquisition cost and development expenditure.

III. To take up new layout development scheme on joint venture with land owners.

IV. To take up Group housing Schemes

V. To take up Town Planning Schemes.

VI. Aquisition for areas proposed for park and open spaces reserved in the master plan.

VII. Development of parks in a layout developed by Urban Development Authorities (except the parks which are handed over to the Local Authority)

**VI.FUND: Development Fund-2**

**1. Source:**

I. Amount generated by allotment of CA sites of the private layout on lease basis.

II. Amount generated by rent or lease of commercial complex or any other commercial establishments.

III. Interest generated from (i) and (ii) above

**2. Utilisation :**

I. Park development within Local Planning area

II. Any development work relating to providing civic amenities, infrastructure development, street light, Arch, etc. in the local planning area limits of respective Urban Development Authority.

III. 25% of the amount shall be earmarked for the FUND : General Administration and Master Plan.

IV. 25% of the amount shall be earmarked for the Development Fund 1.

**It is hereby directed that all the UDA,s while preparing their actual estimate of income and expenditure (budget) shall strictly ensure that the above guidelines are adhered to while allotting / taking up of any development work / estimating expenditure and the commissioner of the concerned Urban Development Authority shall certify that the budget is prepared as per the above guidelines while submitting it for the approval of the Government.**

## 2019-20ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2020-21ನೇ ಸಾಲಿನ ಅಂದಾಜು ಆಯವ್ಯಯವನ್ನು ಮೇಲಿನ ಸರ್ಕಾರಿ ಸುತ್ತೋಲೆಯಂತೆ ಸಿದ್ಧಪಡಿಸಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

### 2019-20ನೇ ಸಾಲಿನ ಪರಿಷ್ಕೃತ ಆದಾಯ ಮತ್ತು ವೆಚ್ಚದ ವಿವರ.

1. 2019-20ನೇ ಸಾಲಿನ ಆದಾಯಕ್ಕೆ ಸಂಬಂಧಿಸಿದಂತೆ, ನಿವೇಶನಗಳ ಹಂಚಿಕೆಯಿಂದ, ನಿವೇಶನಗಳ ಹರಾಜಿನಿಂದ, ವಾಣಿಜ್ಯ ಸಂಕೀರ್ಣಗಳ ಬಾಡಿಗೆ ವಸೂಲಾತಿಯಿಂದ, ನಾಗರಿಕ ಸೌಕರ್ಯ ನಿವೇಶನಗಳಿಂದ, ಅಭಿವೃದ್ಧಿ ಹಾಗೂ ಬೆಳವಣಿಗೆ ಶುಲ್ಕಗಳಿಂದ, ಕಲ್ಯಾಣ ಮಂಟಪಗಳ ಬಾಡಿಗೆಯಿಂದ, ನಿವೇಶನಗಳ ಮೇಲಿನ ಕಂದಾಯದಿಂದ, ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿಯಿಂದ ಹಾಗೂ ಇತರೆ ಆದಾಯ ಮೂಲಗಳಿಂದ ಪ್ರಾಧಿಕಾರವು ರೂ. 40587.00 ಲಕ್ಷಗಳ ಆದಾಯವನ್ನು ನಿರೀಕ್ಷೆ ಮಾಡಲಾಗಿತ್ತು. ಆದರೆ ಏಪ್ರಿಲ್ 2019ರ ಮಾಹೆಯಿಂದ ಡಿಸೆಂಬರ್ 2019ರ ಅಂತ್ಯಕ್ಕೆ ವಾಸ್ತವಿಕ ಆದಾಯ ರೂ. 28954.23 ಲಕ್ಷಗಳು ಮಾತ್ರ ಸ್ವೀಕೃತಿಯಾಗಿದ್ದು ಜನವರಿ 2020 ರಿಂದ ಮಾರ್ಚ್ 2020ರ ಅಂತ್ಯದ ವರೆಗೆ ರೂ.6130.00 ಲಕ್ಷಗಳನ್ನು ನಿರೀಕ್ಷಿಸಿ 2019-20 ನೇ ಸಾಲಿಗೆ ಒಟ್ಟಾರೆ ರೂ.35084.23 ಲಕ್ಷಗಳಿಗೆ ಅಂದಾಜು ಆದಾಯವನ್ನು ಪರಿಷ್ಕರಿಸಲಾಗಿದೆ.

2. 2019-20ನೇ ಸಾಲಿನಲ್ಲಿ ವೆಚ್ಚಕ್ಕೆ ಸಂಬಂಧಿಸಿದಂತೆ, ನಗರಾಭಿವೃದ್ಧಿ ಪ್ರಾಧಿಕಾರವು ಪ್ರಮುಖ ರಸ್ತೆ ಅಭಿವೃದ್ಧಿ ಕಾಮಗಾರಿಗಳು, ಕ್ರೀಡಾಂಗಣಗಳ ಅಭಿವೃದ್ಧಿ, ಉದ್ಯಾನವನಗಳ ಅಭಿವೃದ್ಧಿ ಮತ್ತು ತೋಟಗಾರಿಕೆ, ಮಕ್ಕಳ ಆಟದ ಉದ್ಯಾನವನ, ಪ್ರಾಧಿಕಾರದ ಆಸ್ತಿ ಸೃಜನೆ ಮತ್ತು ಆಸ್ತಿಗಳ ಸಂರಕ್ಷಣೆ ಹಾಗೂ ನಾಗರಿಕ ಸೌಲಭ್ಯ, ಕೆರೆಗಳ ಅಭಿವೃದ್ಧಿ, ಪ್ರಾಧಿಕಾರದ ಬಡಾವಣೆಗಳಿಗೆ ಹೊಂದಿಕೊಂಡಂತೆ ಇರುವ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ, ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳು, ಹೊರವರ್ತುಲ ರಸ್ತೆ, ನೀರು ಸರಬರಾಜು ಯೋಜನೆ, ಇತರೆ ವಿಶೇಷ ಅಭಿವೃದ್ಧಿ ಕಾಮಗಾರಿಗಳೊಂದಿಗೆ, ಭೂ ಸ್ವಾಧೀನ ಪರಿಹಾರ ಪಾವತಿ, ಸಾಲ ಹಾಗೂ ಮುಂಗಡ, ಆಡಳಿತ ಮತ್ತು ಸಿಬ್ಬಂದಿ ವೆಚ್ಚ ಸೇರಿ ಒಟ್ಟು ರೂ. 40320.97 ಲಕ್ಷಗಳ ಅನುದಾನ ಕಾಯ್ದಿರಿಸಿದ್ದು ಅನುಬಂಧದಲ್ಲಿರುವಂತೆ ಡಿಸೆಂಬರ್ 2019 ರ ಅಂತ್ಯಕ್ಕೆ ರೂ. 35412.89 ಲಕ್ಷಗಳ ವೆಚ್ಚವನ್ನು ಭರಿಸಲಾಗಿದ್ದು, ಜನವರಿ 2020 ರಿಂದ ಮಾರ್ಚ್ 2020 ರ ಅಂತ್ಯಕ್ಕೆ ರೂ. 7190.22 ಲಕ್ಷಗಳ ವೆಚ್ಚ ಭರಿಸಲು ಉದ್ದೇಶಿಸಿರುವುದರಿಂದ ಒಟ್ಟಾರೆ ರೂ. 42603.11 ಲಕ್ಷಗಳಿಗೆ ಅಂದಾಜು ವೆಚ್ಚವನ್ನು ಪರಿಷ್ಕರಿಸಲಾಗಿದೆ.

2019-20ನೇ ಸಾಲಿನ ಪರಿಷ್ಕೃತ ಆದಾಯ ಮತ್ತು ವೆಚ್ಚಗಳಿಗೆ ಅನುಬಂಧಗಳಲ್ಲಿರುವಂತೆ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

# 2020-21 ನೇ ಸಾಲಿನ ಅಂದಾಜು ಆದಾಯದ ವಿವರ

## I. ನಿಧಿ:– ಸಾಮಾನ್ಯ ಆಡಳಿತ ಮತ್ತು ಮಹಾಯೋಜನೆ

ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆಯ ಸಂಬಂಧ ಪರಿಶೀಲನಾ ಶುಲ್ಕ, ಮೇಲ್ವಿಚಾರಣಾ ಶುಲ್ಕ, ಮೇಲ್ತೈ ಶುಲ್ಕ, ಕಾರ್ಮಿಕ ಶುಲ್ಕ, ಕುಡಿಯುವ ನೀರು ಮತ್ತು ಮಲಿನ ನೀರು ಹೊರಸೂಸುವ ಮಾರ್ಗದ ಶುಲ್ಕ, ಇಂಪ್ಯಾಕ್ಟ್ ಸೆಸ್, ಹಾಗೂ ನಿವೇಶನ ಕಂದಾಯ, ಮನೆ ಕಂದಾಯ, ವರ್ಗಾವಣೆ ಶುಲ್ಕ, ಇತರೆ ಶುಲ್ಕಗಳಿಂದ ಒಟ್ಟಾರೆ ರೂ.6300.00 ಲಕ್ಷಗಳ ಆದಾಯ ನಿರೀಕ್ಷಿಸಲಾಗಿದೆ.

## II. ನಿಧಿ:– ಕೆರೆಗಳ ಸಂರಕ್ಷಣಾ ಶುಲ್ಕ

ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಕೆರೆ ಸಂರಕ್ಷಣಾ ಶುಲ್ಕ ರೂ.500.00 ಲಕ್ಷಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

## III. ನಿಧಿ :– ಉದ್ಯಾನವನ ಮತ್ತು ತೆರೆದ ಪ್ರದೇಶಗಳಿಂದ ಶುಲ್ಕ

ಸದರಿ ಸಾಲಿನಲ್ಲಿ ಯಾವುದೇ ಆದಾಯವನ್ನು ಈ ನಿಧಿಯಡಿ ನಿರೀಕ್ಷಿಸಿರುವುದಿಲ್ಲ

## IV. ನಿಧಿ:– ಸ್ಲಂ ಸೆಸ್ :

ಪ್ರಾಧಿಕಾರದಿಂದ ಖಾಸಗಿ ಬಡಾವಣೆಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆಯಾದ ನಂತರ ಕಾರ್ಯಾದೇಶ ನೀಡುವ ಸಂಬಂಧ ಸ್ಲಂ ಸೆಸ್‌ಗಳಿಂದ ರೂ.50.00 ಲಕ್ಷಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

## V. ನಿಧಿ:– ಅಭಿವೃದ್ಧಿ ನಿಧಿ – 1

ಪ್ರಾಧಿಕಾರದ ವಿವಿಧ ಬಡಾವಣೆಗಳಲ್ಲಿ ಲಭ್ಯವಿರುವ ಮೂಲೆ ನಿವೇಶನಗಳು, ಹಂಚಿಕೆಯಾಗದ ಮಧ್ಯಂತರ ನಿವೇಶನಗಳು, ಹಾಗೂ ವಾಣಿಜ್ಯ ನಿವೇಶನಗಳ ಹರಾಜಿನಿಂದ, ಗುಂಪು ವಸತಿ ಯೋಜನೆಯಡಿ ಹಂಚಿಕೆಯಾಗದಿರುವ ಎಲ್‌ಐಜಿ, ಎಂಐಜಿ, ಹೆಚ್‌ಐಜಿ ಮನೆಗಳು ಹಾಗೂ ಇತರೆ ಮನೆಗಳ ಹರಾಜಿನಿಂದ, ಪ್ರಾಧಿಕಾರದ ಸಿ.ಎ ನಿವೇಶನಗಳ ಹಂಚಿಕೆಯಿಂದ, ಕ್ರಯಪತ್ರದ ದಂಡ ಶುಲ್ಕದಿಂದ, ತುಂಡುಜಾಗ ಹಂಚಿಕೆಯಿಂದ, ಹಾಗೂ ಇತರೆ ಆದಾಯ ಮೂಲಗಳಿಂದ ಒಟ್ಟಾರೆ ರೂ.20000.00 ಲಕ್ಷಗಳನ್ನು ನಿರೀಕ್ಷಿಸಲಾಗಿದೆ.

## VI. ನಿಧಿ :– ಅಭಿವೃದ್ಧಿ ನಿಧಿ – 2

ಪ್ರಾಧಿಕಾರದಿಂದ ಹಂಚಿಕೆಯಾಗದೇ ಖಾಲಿ ಇರುವ ಖಾಸಗಿ ಬಡಾವಣೆಯ 411 ಸಿ.ಎ ನಿವೇಶನಗಳನ್ನು ಈಗಾಗಲೇ ಪ್ರಾಧಿಕಾರವು ಗುರುತಿಸಿದ್ದು, ಅವುಗಳನ್ನು ಅಧಿಸೂಚನೆ ಮೂಲಕ ಹಂಚಿಕೆ ಮಾಡಿ ಬರುವ ಆದಾಯದ ಮೂಲದಿಂದ ಹಾಗೂ ಈಗಾಗಲೇ ಕೆಲವೊಂದು ಖಾಸಗಿ ಬಡಾವಣೆಗಳಲ್ಲಿ ರಚನೆಯಾಗಿರುವ ಸಿ.ಎ ನಿವೇಶನಗಳನ್ನು ಹಂಚಿಕೆಮಾಡಿದ್ದು, ಸಿ.ಎ ನಿವೇಶನಗಳ ನಿಯಮ ಉಲ್ಲಂಘನೆಯಾಗಿರುವ ನಿವೇಶನಗಳನ್ನು ಅಧಿಸೂಚನೆ ಮೂಲಕ ಮರು ಹಂಚಿಕೆ ಮಾಡಿ ಬರುವ ಆದಾಯದಿಂದ ಹಾಗೂ ವಾಣಿಜ್ಯ ಕಟ್ಟಡಗಳಿಂದ, ನಂದಿನಿ ಪಾರ್ಲರ್‌ಗಳಿಂದ, ಮೀನು ಮಾರುಕಟ್ಟೆಗಳಿಂದ, ಕಲ್ಯಾಣ ಮಂಟಪ ಬಾಡಿಗೆಯಿಂದ ಹಾಗೂ ಇತರೆ ಆದಾಯಗಳಿಂದ ಒಟ್ಟಾರೆ ರೂ.5600.00 ಲಕ್ಷಗಳ ಆದಾಯ ನಿರೀಕ್ಷಿಸಲಾಗಿದೆ.

# 2020-21ನೇ ಸಾಲಿನ ನಿಧಿಗಳವಾರು ಅಂದಾಜು ವೆಚ್ಚದ ವಿವರ

## I. ನಿಧಿ :- ಸಾಮಾನ್ಯ ಆಡಳಿತ ಮತ್ತು ಮಹಾಯೋಜನೆ :

ಮೈಸೂರು ನಗರಕ್ಕೆ ಮಹಾಯೋಜನೆ (ಪರಿಷ್ಕೃತ-2)-2031ಅನ್ನು ತಯಾರಿಸಿ ಅದು 2016ನೇ ಸಾಲಿನಲ್ಲಿ ಅನುಮೋದನೆಯಾಗಿರುತ್ತದೆ. ಸದರಿ ಮಹಾಯೋಜನೆಯಲ್ಲಿ ಹೊಸದಾಗಿ ಹಲವಾರು ಹೊಸ ರಸ್ತೆಗಳನ್ನು ಪ್ರಸ್ತಾಪಿಸಿದ್ದು, ಅವುಗಳ ಪೈಕಿ ನಗರದ ಸುತ್ತಾ ಪ್ರಸ್ತಾಪಿಸಿರುವ ಹೊಸ ಪರಿಧಿ ರಸ್ತೆ 80'ಅಡಿ ಅಗಲದ ರಸ್ತೆಗಳು 60' ಅಡಿ ಅಗಲದ ರಸ್ತೆಗಳು ಒಳಗೊಂಡಿರುತ್ತವೆ.

ಈ ರಸ್ತೆಗಳು ನಗರ ಬೆಳೆದಂತೆಲ್ಲಾ ಪರಿಚಲನ ವ್ಯವಸ್ಥೆ ಸುವ್ಯವಸ್ಥಿತವಾಗಿ ಬೆಳಯಲು ಪೂರಕವಾದ ಸಂಚಾರ ವ್ಯವಸ್ಥೆ ಸುಗಮಮಾಡಲು ಮತ್ತು ನಗರವು ಯೋಜನಾ ಬದ್ಧವಾಗಿ ಬೆಳೆಯಲು ಸಹಕಾರಿಯಾಗಿರುತ್ತದೆ. ಆದ್ದರಿಂದ ಸದರಿ ಹೊರ ಪರಿಧಿ ರಸ್ತೆ ಮತ್ತು ನಗರದ ಹಲವು ಜಾಗಗಳಿಗೆ ಅಭಿವೃದ್ಧಿಪಡಿಸಲು ಈ ಸಾಲಿನಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

ಮೈಸೂರು ನಗರದ ಸುತ್ತಾ 105 ಕಿ.ಮೀ. ಹೊರ ಪರಿಧಿ ರಸ್ತೆ ಪ್ರಸ್ತಾಪಿಸಿದ್ದು, ಅದನ್ನು ಭಾಗಶಃ ಅಭಿವೃದ್ಧಿಪಡಿಸಲು ಈ ಸಾಲಿನಲ್ಲಿ ಪ್ರಸ್ತಾಪಿಸಿದೆ.

ಮಹಾಯೋಜನೆಯಲ್ಲಿ ವಾಣಿಜ್ಯ ಉದ್ದೇಶಕ್ಕೆ (ಮಾರುಕಟ್ಟೆ ಅಭಿವೃದ್ಧಿಗೆ) ಹಲವಾರು ಸ್ಥಳಗಳನ್ನು ಗುರುತಿಸಿ ಪ್ರಸ್ತಾಪಿಸಿದೆ. ಇವುಗಳು ನಗರದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುವುದಲ್ಲದೇ ನಗರಕ್ಕೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ವಾಸಿಸುವ ರೈತರು ಮತ್ತು ಸಾಮಾನ್ಯ ಜನರಿಗೆ ತುಂಬಾ ಉಪಯೋಗವಾಗುವುದು. ಆದ್ದರಿಂದ ನಗರದ ಹಲವಾರು ಭಾಗಗಳಲ್ಲಿ ಮಾರುಕಟ್ಟೆಗಳ ಅಭಿವೃದ್ಧಿಗೆ ಪ್ರಸ್ತಾಪಿಸಲಾಗಿರುತ್ತದೆ.

ಮಹಾಯೋಜನೆಯಲ್ಲಿ ನಗರದಿಂದ ಹೊರಹೋಗುವ ರಸ್ತೆಗಳಲ್ಲಿ ಟ್ರಕ್ ಅಂಡ್ ಟರ್ಮಿನಲ್ ಗಳನ್ನು ಪ್ರಸ್ತಾಪಿಸಿದ್ದು, ಇವುಗಳು ಭಾರಿ ವಾಹನಗಳ ನಿಲುಗಡೆಗೆ ಮತ್ತು ವಾಹನ ರಿಪೇರಿ, ಗ್ಯಾರೇಜ್‌ಗಳು ಹಾಗೂ ಇದಕ್ಕೆ ಪೂರಕವಾದ ಚಟುವಟಿಕೆಗಳಿಗೆ ಸೌಲಭ್ಯ ಒದಗಿಸಲು ಸಹಕಾರಿಯಾಗುತ್ತದೆ. ಆದ್ದರಿಂದ ಈ ಸಾಲಿನಲ್ಲಿ ಹುಣಸೂರು ರಸ್ತೆಯಲ್ಲಿ ಮತ್ತು ಬೆಂಗಳೂರು ರಸ್ತೆಯಲ್ಲಿ ಎರಡು ಟ್ರಕ್ ಅಂಡ್ ಟರ್ಮಿನಲ್ ಅನ್ನು ಪ್ರಸ್ತಾಪಿಸಲಾಗಿದೆ.

ಕ್ರೀಡಾಂಗಣ ನಿರ್ಮಾಣ, ವೃತ್ತಗಳ ಅಭಿವೃದ್ಧಿ, ಬಾಲಭವನ ಅಭಿವೃದ್ಧಿ, ಕನ್ವೆನ್ಷನ್ ಹಾಲ್‌ಗಳ ನಿರ್ಮಾಣವನ್ನು ಈ ಸಾಲಿನಲ್ಲಿ ಪ್ರಸ್ತಾಪಿಸಿದೆ. ಇದರಿಂದ ಸಾಮಾನ್ಯ ಆಡಳಿತ ಮತ್ತು ಮಹಾಯೋಜನೆಗಾಗಿ 2020-21ನೇ ಸಾಲಿಗೆ ಒಟ್ಟಾರೆ ರೂ.6500.00 ಲಕ್ಷಗಳ ವೆಚ್ಚ ಭರಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಈ ಕೆಳಕಂಡ ಪ್ರಮುಖ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

## ಮೈಸೂರು ನಗರಕ್ಕಾಗಿ ಪ್ರಸ್ತಾಪಿಸಿರುವ ಪರಿಧಿ ರಸ್ತೆ (Outer Peripheral Ring Road)

ಮೈಸೂರು ನಗರದ ಸುತ್ತಾ ಈಗಾಗಲೇ 42 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆಯನ್ನು ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಲಾಗಿದೆ. ಇದು ಸಾರ್ವಜನಿಕರಿಗೆ ಬಹಳ ಉಪಯೋಗವಾಗುತ್ತಿದ್ದು, ಇದು ಸುತ್ತಮುತ್ತಲ ಪ್ರದೇಶದ ಯೋಜಿತ ಬೆಳವಣಿಗೆಗೆ ಪೂರಕವಾಗಿದೆ. ಹಾಗೂ ಇದನ್ನು ಈಗಾಗಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆ.

ಈಗ ಮೈಸೂರು ನಗರಕ್ಕೆ ಅನುಮೋದನೆಯಾದ ಮಹಾಯೋಜನೆಯಲ್ಲಿ 105 ಕಿ.ಮೀ. ಉದ್ದದ ಮತ್ತೊಂದು ಹೊರ ವರ್ತುಲ(ಪರಿಧಿ) ರಸ್ತೆಯನ್ನು ಪ್ರಸ್ತಾಪಿಸಲಾಗಿದೆ. ಉದ್ದೇಶಿಸಿರುವ ಸದರಿ ಹೊರ ಪರಿಧಿ ವರ್ತುಲ ರಸ್ತೆ ಒಟ್ಟು 105.31ಕಿ.ಮೀ ಇದೆ. ಈ ಪರಿಧಿರಸ್ತೆಯ ಅಗಲ 45ಮೀ. ಗಳಿದ್ದು, 2 ಬದಿಗಳಲ್ಲಿ 9.0ಮೀ. ಅಗಲದ ಸರ್ವೀಸ್ ರಸ್ತೆಗಳನ್ನು ಒಳಗೊಂಡಿದ್ದು, ಸದರಿ ರಸ್ತೆಯ ಅಗಲ ಒಟ್ಟಾರೆಯಾಗಿ 63.0ಮೀ. ಅಗಲವಾಗಿರುತ್ತದೆ. ಈ ಪರಿಧಿರಸ್ತೆಯ ಪಂಕ್ತಿಕರಣವು ಸ್ಥಳೀಯ ಯೋಜನಾ ಪ್ರದೇಶದ ಒಳಗೆ ಹಾಗೂ ಹೊರಗೆ ಹಾದು ಹೋಗುತ್ತದೆ. ಸ್ಥಳೀಯ ಯೋಜನಾ ಪ್ರದೇಶದೊಳಗೆ 49.00ಕಿ.ಮೀ. ಸ್ಥಳೀಯ ಯೋಜನಾ ಪ್ರದೇಶದ ಹೊರಗೆ 56.31ಕಿ.ಮೀ ಇರುತ್ತದೆ. ಸ್ಥಳೀಯ ಯೋಜನಾ ಪ್ರದೇಶಗೊಳಗೆ ಇರುವ 49.00ಕಿ.ಮೀ ಪರಿಧಿಯ ರಸ್ತೆಯಲ್ಲಿ 31.25ಕಿ.ಮೀ ಇರುವ ಹಾಲಿ ರಸ್ತೆಯನ್ನು ಉಪಯೋಗಿಸಿಕೊಂಡು, ಆ ರಸ್ತೆಗಳನ್ನು ಅಗಲೀಕರಿಸಿ ಅಭಿವೃದ್ದಿಪಡಿಸುವುದು. ಉಳಿಕೆ 17.75ಕಿ.ಮೀ ಉದ್ದದ ರಸ್ತೆಯನ್ನು ಹೊಸದಾಗಿ ಅಭಿವೃದ್ದಿಪಡಿಸುವಂತೆ ಪ್ರಸ್ತಾಪಿಸಲಾಗಿರುತ್ತದೆ.

ಮೊದಲ ಹಂತದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಒಳಗಿನ ಹಾಲಿ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ದಿಪಡಿಸಬೇಕಾಗಿರುವ 31.25ಕಿ.ಮೀ ಉದ್ದದ ಪರಿಧಿರಸ್ತೆಯನ್ನು ಅಭಿವೃದ್ದಿಪಡಿಸುವುದು ಹಾಗೂ ಉಳಿಕೆ 17.75 ಕಿ.ಮೀ.ನ್ನು ಹೊಸದಾಗಿ ಅಭಿವೃದ್ಧಿಪಡಿಸಬಹುದಾಗಿದ್ದು ಇದರಿಂದಾಗಿ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ 49.ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆ ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದಂತಾಗುತ್ತದೆ.

ಈ ಪರಿಧಿರಸ್ತೆಯನ್ನು ಮೇಲೆ ವಿವರಿಸಿದಂತೆ ಅಭಿವೃದ್ಧಿಪಡಿಸಲು "ನಗರ ಯೋಜನಾ ಸ್ಕೀಂ" ಯೋಜನೆಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದ್ದು, ಇದರಿಂದಾಗಿ ರಸ್ತೆ ವಿಸ್ತರಣೆಗೆ ಹಾಗೂ ಹೊಸ ರಸ್ತೆ ನಿರ್ಮಾಣಕ್ಕೆ ತಗಲಬಹುದಾದ ಭೂ ಸ್ವಾಧೀನ ವೆಚ್ಚ ಸಂಪೂರ್ಣವಾಗಿ ಉಳಿತಾಯವಾಗುತ್ತದೆ ಹಾಗೂ ಜಮೀನಿನ ಮಾಲೀಕರಿಗೂ ತುಂಬಾ ಅನುಕೂಲವಾಗುತ್ತದೆ.

ಹುಣಸೂರು ರಸ್ತೆಯಿಂದ ಗದ್ದಿಗೆ ರಸ್ತೆ ಮಧ್ಯೆ ಇರುವ ಸುಮಾರು 10.00ಕಿ.ಮೀ. ಉದ್ದದ ಪರಿಧಿರಸ್ತೆಯನ್ನು ಪ್ರಸ್ತಾಪಿಸಿದ್ದು, ಈ ರಸ್ತೆ ಹಾದು ಹೋಗುವ ಪಂಕ್ತಿಕರಣದಲ್ಲಿ ಈಗಾಗಲೇ ಹಲವು ಜಮೀನುಗಳು ಭೂ ಪರಿವರ್ತನೆಗೊಂಡು ಅವುಗಳಲ್ಲಿ ಕೆಲವು ಬಡಾವಣೆಗಳು ಅನುಮೋದನೆಗೊಂಡು ಅಭಿವೃದ್ಧಿಗೊಳ್ಳುತ್ತಿವೆ. ಈ ಮಧ್ಯೆ ಭೂ ಪರಿವರ್ತನೆ ಆಗದೆ ಉಳಿದಿರುವ ಜಮೀನುಗಳನ್ನೊಳಗೊಂಡಂತೆ ಈ ಭಾಗದಲ್ಲಿ ಪರಿಧಿ ರಸ್ತೆ

ಅಭಿವೃದ್ಧಿಪಡಿಸಿರುವುದರಿಂದ ಸಾರ್ವಜನಿಕರಿಗೆ ಹೆಚ್ಚು ಉಪಕಾರಿಯಾಗಿರುತ್ತದೆ ಹಾಗೂ ಆ ಭಾಗದ ಬೆಳವಣಿಗೆಗೆ ಸಹಕಾರಿಯಾಗಿರುತ್ತದೆ ಅಲ್ಲದೆ ಪರಿಧಿರಸ್ತೆ ಅನುಷ್ಠಾನಗೊಳಿಸಲು ಸುಲಭವಾಗಿರುತ್ತದೆ. ಆದ್ದರಿಂದ ಈ ಭಾಗದ ಪರಿಧಿರಸ್ತೆಯನ್ನು ರೂ.500.00 ಲಕ್ಷಗಳಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

## ನಗರ ಯೋಜನಾ ಯೋಜನೆಗಳು : T.P. Schemes

ಹಿಂದಿನ ಸಿ.ಐ.ಟಿ.ಬಿ. ಮತ್ತು ಇಂದಿನ ಪ್ರಾಧಿಕಾರವು ಒಟ್ಟು ಸುಮಾರು 5ಸಾವಿರ ಎಕರೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡು 60 ಬಡಾವಣೆಗಳನ್ನು ಅಭಿವೃದ್ಧಿಪಡಿಸಿದೆ. ಇದರಲ್ಲಿ ಸುಮಾರು 50ಸಾವಿರ ನಿವೇಶನಗಳನ್ನು ರಚಿಸಿ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿರುತ್ತದೆ. ಆದರೆ, ಪ್ರಾಧಿಕಾರದಿಂದ 1995–96ರಲ್ಲಿ ಭೂ ಸ್ವಾಧೀನಪಡಿಸಿಕೊಂಡು ಸುಮಾರು 02 ಸಾವಿರ ನಿವೇಶನಗಳನ್ನು ಇತ್ತೀಚಿನ ದಿನಗಳಲ್ಲಿ ಹಂಚಿರುವುದು ಕೊನೆಯ ಹಂಚಿಕೆಯಾಗಿರುತ್ತದೆ.

ಅಲ್ಲಿಂದ ಯಾವುದೇ ಯೋಜನೆಗಳಿಗೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾಧಿಕಾರದಿಂದ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಈಗಿನ ಭೂ ಸ್ವಾಧೀನ ಕಾಯ್ದೆಯಂತೆ ರೈತರ ಸಮ್ಮತಿ ಪಡೆದು ಭೂ ಸ್ವಾಧೀನ ಪ್ರಕ್ರಿಯೆ ಕೈಗೊಳ್ಳಬೇಕಾದ ಹಿನ್ನಲೆಯಲ್ಲಿ ಭೂ ಸ್ವಾಧೀನ ಇನ್ನೂ ಹೆಚ್ಚು ಕ್ಲಿಷ್ಟಕರವಾಗಿರುತ್ತದೆ.

ಸರ್ಕಾರವು ಆದೇಶ ಸಂಖ್ಯೆ **UDD 44 BEMRUPRA 2009 Bangalore,** ದಿನಾಂಕ:30–07–2009ರ ಮೂಲಕ ಭೂ ಸ್ವಾಧೀನದಲ್ಲಿ ಶೇಕಡ 40:60 ಹಾಗೂ ಶೇ50:50ರ ಅನುಪಾತದ ಮಾದರಿಯಲ್ಲಿ ರೈತರ ಸಹಭಾಗಿತ್ವದಲ್ಲಿ ಯೋಜನೆಯನ್ನು ರೂಪಿಸಿ ಕೈಗೊಳ್ಳಲು ಅವಕಾಶ ಕಲ್ಪಿಸಿದ್ದರೂ ಈ ಮಾದರಿಯಲ್ಲಿ ಇತ್ತೀಚಿಗೆ ತುಂಬಾ ಪ್ರಯತ್ನಿಸಲಾದರೂ ಬಲ್ಲಹಳ್ಳಿ 50:50 ಯೋಜನೆಯನ್ನು ಸಹ ಕಾರ್ಯಗತಗೊಳಿಸಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಈ ಮಾದರಿ ಯೋಜನೆಗೂ ರೈತರು ಪೂರ್ಣವಾಗಿ ಸಹಕಾರ ನೀಡಿ ಪಾಲ್ಗೊಳ್ಳುತ್ತಿಲ್ಲ. ರೈತರು ಅವರಿಗೆ ಸಿಗಬಹುದಾದ ನಿವೇಶನಗಳ ಭಾಗದ ಬಗ್ಗೆ ಈಗಲೂ ಅಸಮಧಾನ ಹೊಂದಿರುತ್ತಾರೆ, ಈ ಹಿನ್ನೆಲೆಯಲ್ಲಿ ಪ್ರಾಧಿಕಾರದಿಂದ ಯೋಜನೆಗಳನ್ನು ಕೈಗೊಳ್ಳದೇ ಇರುವುದರಿಂಧ ಹೆಚ್ಚಾಗಿ ಖಾಸಗಿ ಬಡಾವಣೆಗಳು ಬರುತ್ತಿವೆ. ಬಹುತೇಕ ಖಾಸಗಿ ಬಡಾವಣೆಗಳು (ವಿಸ್ತೀರ್ಣ ತುಂಬಾ ಕಡಿಮೆ ಇರುವುದರಿಂದ) ನಗರದ ಯೋಜಿತ ಬೆಳವಣಿಗೆಗೆ ಇದು ಪೂರಕವಾಗಿಲ್ಲ.

ಇದರಿಂದಾಗಿ ಮಹಾಯೋಜನೆ ಅನುಷ್ಠಾನಗೊಳಿಸಲು ನಗರದ ಯೋಜಿತ ಬೆಳವಣಿಗೆಗೆ ಪೂರಕವಾಗಿ ಪ್ರಾಧಿಕಾರವು ಕಾರ್ಯ ನಿರ್ವಹಿಸಲು ಪರ್ಯಾಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಅಧ್ಯಾಯ 05ರನ್ವಯ ಕಲಂ 26ರಿಂದ 66ರವರೆಗೂ ನಗರ ಯೋಜನಾ ಸ್ಕೀಂ **(Town Planning Scheme)** ಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಗೆ ಸೂಕ್ತ ಜಮೀನುಗಳನ್ನು ಆಯ್ಕೆ ಮಾಡಿಕೊಂಡು ಮಹಾಯೋಜನೆಯಂತೆ ಆ

ಜಾಗವನ್ನು ಮೂಲಭೂತ ಸೌಕರ್ಯಗಳೊಂದಿಗೆ ಅಭಿವೃದ್ಧಿಪಡಿಸಿ (ಮಹಾಯೋಜನೆಯಡಿ ರಸ್ತೆಗಳು, ಉದ್ಯಾನವನಗಳು, ನಾಗರೀಕ ಸೌಕರ್ಯ ಪ್ರದೇಶಗಳು ಹಾಗೂ ಸಾರ್ವಜನಿಕ ಉಪಯುಕ್ತತೆ ಪ್ರದೇಶಗಳು ಇತ್ಯಾದಿ) ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿಯೊಂದಿದ ನಿವೇಶನಗಳು ಭೂ ಮಾಲೀಕತ್ವದ ಜಮೀನಿಗೆ ಬದಲಿಯಾಗಿ ರೈತರಿಗೆ ವಾಪಸ್ಸು ನೀಡುವ ಯೋಜನೆಯಾಗಿರುತ್ತದೆ. ಇದರಲ್ಲಿ ಆ ಪ್ರದೇಶವನ್ನು ಅಭಿವೃದ್ಧಿಪಡಿಸಲು ಬೇಕಾಗುವ ಸಂಪನ್ಮೂಲವನ್ನು ಒದಗಿಸಲು ಸರಿದೂಗಿಸಿಕೊಳ್ಳುವಷ್ಟು ಪ್ರದೇಶವನ್ನು / ಜಾಗವನ್ನು ಮಾತ್ರ ರೈತರಿಂದ ಪ್ರಾಧಿಕಾರವು ಪಡೆಯುತ್ತದೆ. ಇದರಿಂದಾಗಿ ರೈತರಿಗೆ 60:40 ಅಥವಾ 50:50ರ ಅನುಪಾತದ ಯೋಜನೆಗೆ ಹೋಲಿಸಿದಲ್ಲಿ ಅತೀ ಹೆಚ್ಚು ಪ್ರದೇಶದದಲ್ಲಿ ನಿವೇಶನಗಳು ದೊರೆಯುತ್ತವೆ. ವಾಸ್ತವವಾಗಿ ಅಭಿವೃದ್ಧಿ ಹೊಂದಿದ ನಿವೇಶನಗಳಾಗಿ ಮಾರ್ಪಾಡಾದ ಪೂರ್ಣ ಪ್ರದೇಶವು ರೈತರಿಗೆ ವಾಪಸ್ಸು ದೊರೆಯುತ್ತದೆ. ಈ ಮಾದರಿಯ ಅಭಿವೃದ್ಧಿ ಯೋಜನೆಗಳನ್ನು ಹೆಚ್ಚಾಗಿ ಗುಜರಾತ್ ರಾಜ್ಯದಲ್ಲಿ ಕೈಗೊಳ್ಳಲಾಗುತ್ತಿದೆ. ಅಹಮದಬಾದ್ ನಗರಕ್ಕೆ ರಿಂಗ್ ರಸ್ತೆಯನ್ನು ರೈತರ ಸಹಭಾಗಿತ್ವದೊಂದಿಗೆ ಟಿ.ಪಿ.ಸ್ಕೀಂ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ.

ಪ್ರಾಧಿಕಾರವೂ ಕೂಡ ಮಹಾಯೋಜನೆಯಲ್ಲಿ ಪ್ರಸ್ತಾಪಿಸಲಾಗಿರುವ ಪರಿಧಿರಸ್ತೆಯನ್ನು ಇದೇ ಮಾದರಿಯಲ್ಲಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಪ್ರಸ್ತುತ ಸಾಲಿನಲ್ಲಿ ರೂ.500.00 ಲಕ್ಷಗಳನ್ನು ಕಾಯ್ದಿರಿಸಿದೆ.

### ಟ್ರಕ್ ಟರ್ಮಿನಲ್

ಮೈಸೂರು ನಗರದ ಸುತ್ತಾ ಸುಮಾರು 45.00 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆಯನ್ನು ಪ್ರಾಧಿಕಾರದಿಂದ ನಿರ್ಮಿಸಲಾಗಿದ್ದು, ಈ ರಸ್ತೆಯ ಊಟಿ ಜಂಕ್ಷನ್ ಬಳಿ ಟ್ರಕ್ ಟರ್ಮಿನಲ್ ಸಹ ನಿರ್ಮಿಸಲಾಗಿರುವುದರಿಂದ ಇವುಗಳನ್ನು ಕ್ರಮವಾಗಿ ರಾಷ್ಟ್ರೀಯ ಹೆದ್ದಾರಿ ಹಾಗೂ ದೇವರಾಜ ಅರಸ್ ಟ್ರಕ್ ಟರ್ಮಿನಲ್ ರವರಿಗೆ ಈಗಾಗಲೇ ಹಸ್ತಾಂತರಿಸಲಾಗಿರುತ್ತದೆ.

ಮೈಸೂರು ನಗರಕ್ಕೆ ಮೂಲಭೂತ ಸೌಕರ್ಯಗಳಾದ ರಸ್ತೆ, ರೈಲು ಹಾಗೂ ಇತ್ತೀಚೆಗೆ ವಿಮಾನ ಸೌಲಭ್ಯಗಳನ್ನು ವಿಸ್ತರಿಸಿರುವುದರಿಂದ ನಗರವು ಇನ್ನೂ ವೇಗವಾಗಿ ಬೆಳೆಯುವ ಸಾಧ್ಯತೆಗಳಿರುತ್ತದೆ.

ಈಗಾಗಲೇ ನಗರದ ಹೊರವರ್ತುಲ ರಸ್ತೆಯ ಸರ್ವೀಸ್ ರಸ್ತೆಗಳಲ್ಲಿ ಹೊರ ಭಾಗಗಳಿಂದ ಬರುತ್ತಿರುವ ಭಾರೀ ಗಾತ್ರದ ವಾಹನಗಳನ್ನು ನಿಲ್ಲಿಸುತ್ತಿದ್ದು, ಇವುಗಳಿಗೆ ಸೂಕ್ತ ನಿಲ್ದಾಣ ಹಾಗೂ ಗ್ಯಾರೇಜ್ ಮತ್ತು ವಾಹನ ಚಾಲಕರುಗಳಿಗೆ ಶೌಚಾಲಯ ನಿರ್ಮಾಣಗಳನ್ನು ಒಳಗೊಂಡಂತೆ 1. ಮೈಸೂರು – ಬೆಂಗಳೂರು ಹಾಗೂ ಹೊರವರ್ತುಲ ರಸ್ತೆ ಸೇರುವ ಜಂಕ್ಷನ್. 2. ಮೈಸೂರು – ಹುಣಸೂರು ರಸ್ತೆಯಲ್ಲಿನ ನಾಗವಾಲ ರಸ್ತೆ ಜಂಕ್ಷನ್.

ಈ ಸ್ಥಳಗಳಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸಲು ಉದ್ದೇಶಿಸಿ ಡಿ.ಪಿ.ಆರ್. ತಯಾರಿಸಲು ಸಾಂಕೇತಿಕವಾಗಿ ರೂ.20.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

## ವೃತ್ತಗಳ ಅಭಿವೃದ್ಧಿ :

ಮೈಸೂರು ನಗರದ ಹೊರವರ್ತುಲ ರಸ್ತೆ ಹಾಗೂ ವಿಶ್ವಮಾನವ ಜೋಡಿ ರಸ್ತೆಗಳು ನಾಲ್ಕು ಪಥಗಳ ರಸ್ತೆಗಳಾಗಿದ್ದು, ಸದರಿ ರಸ್ತೆಗಳಲ್ಲಿ ವಾಹನಗಳ ಸಾಂದ್ರತೆ ಅತಿ ಹೆಚ್ಚಾಗಿರುತ್ತದೆ. ಈ ಎರಡು ರಸ್ತೆಗಳು ಸಂಧಿಸುವಲ್ಲಿ ಹಲವು ಬಡಾವಣೆ ರಸ್ತೆಗಳು ಸಹ ಬಂದು ಈ ವೃತ್ತಕ್ಕೆ ಸೇರಿಕೊಳ್ಳುತ್ತವೆ. ಆದ್ದರಿಂದ ಬಡಾವಣೆಗಳಿಂದ, ವಿಶ್ವಮಾನವ ಜೋಡಿ ರಸ್ತೆಯಿಂದ ಹಾಗೂ ಹೊರ ವರ್ತುಲ ರಸ್ತೆಯಿಂದ ಬರುವಂತಹ ವಾಹನಗಳು ತಿರುವು ಪಡೆದುಕೊಂಡು ತಿರುವು ಪಡೆದ ಪಥಗಳಲ್ಲಿ ಸರಾಗವಾಗಿ ಚಲಿಸಲು ವೃತ್ತಗಳ ಅಭಿವೃದ್ಧಿ ಪಡಿಸುವುದು ಅತ್ಯವಶ್ಯಕವಾಗಿರುತ್ತದೆ. ಸದರಿ ವೃತ್ತವನ್ನು ಕನಿಷ್ಠ 15 ಮೀಟರ್ ವ್ಯಾಸದಲ್ಲಿ ನಿರ್ಮಿಸಿ, ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತುಂಬಾ ಅನುಕೂಲಕರವಾಗಿರುತ್ತದೆ. ಈ ಕಾಮಗಾರಿಯನ್ನು ರೂ.250.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಹಾಗೂ ಈ ಸಾಲಿನಲ್ಲಿ ರೂ.15.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

## ವಾಣಿಜ್ಯ ಸಂಕೀರ್ಣ /ಕಟ್ಟಡ

- ದೇವನೂರು 1ನೇ ಹಂತ ಹುಡ್ಕೋ ಹಾಗೂ ದೇವನೂರು 3ನೇ ಹಂತ ಬಡಾವಣೆಯಲ್ಲಿ ವಾಣಿಜ್ಯ ಸಂಕೀರ್ಣಕ್ಕೆಂದು ಕಾಯ್ದಿರಿಸಿರುವ ಭೂ ಪ್ರದೇಶದಲ್ಲಿ ಆರ್.ಟಿ.ಓ ಕಛೇರಿ ಮುಂಭಾಗ ಸಾರ್ವಜನಿಕರ ಉಪಯೋಗಕ್ಕಾಗಿ ಅಂಗಡಿ ಮಳಿಗೆಗಳು ಅವಶ್ಯಕವಾಗಿರುವುದರಿಂದ ಈ ಭಾಗದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡಲು ಮತ್ತು ಮೈಸೂರು–ಊಟಿ ರಸ್ತೆ ಯಲ್ಲಿರುವ ರಣಜಿತ್ ಚಿತ್ರಮಂದಿರದ ಎದುರುಗಡೆ ಪ್ರಾಧಿಕಾರದ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ಸಾರ್ವಜನಿಕ ಸಹಭಾಗಿತ್ವದಡಿಯಲ್ಲಿ ಕೈಗೊಳ್ಳಲು (ಪಿಪಿಪಿ) ಒಟ್ಟಾರೆಯಾಗಿ ರೂ.50.00 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ.
- ವಿಜಯನಗರ 4ನೇ ಹಂತ 2ನೇ ಘಟ್ಟ ಬಡಾವಣೆಯ ಹತ್ತಿರವಿರುವ ರಿಂಗ್ ರಸ್ತೆಯಿಂದ ಬಸವನಹಳ್ಳಿ ರಸ್ತೆಯ ಮಾರ್ಗದಲ್ಲಿ ನಿವೇಶನ ಸಂಖ್ಯೆ 7267 / ಎ ಮತ್ತು 7268/ ಎ ರ ಪಕ್ಕದಲ್ಲಿರುವ ಪ್ರಾಧಿಕಾರದ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡ ನಿರ್ಮಾಣವನ್ನು ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಕೈಗೊಳ್ಳಲು (ಪಿಪಿಪಿ) ಸಾಂಕೇತಿಕವಾಗಿ ರೂ.10.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ
- ವಿಜಯನಗರ 3ನೇ ಹಂತ ಎ1 ಬ್ಲಾಕ್ ಮುಖ್ಯ ರಸ್ತೆಯಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣವನ್ನು ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಕೈಗೊಳ್ಳಲು (ಪಿಪಿಪಿ) ಸಾಂಕೇತಿಕವಾಗಿ ರೂ.10.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

## ಕನ್ವೆನ್ಷನ್ ಹಾಲ್ /ಕಲ್ಯಾಣ ಮಂಟಪ ನಿರ್ಮಾಣ

- ಸಿದ್ಧಾರ್ಥ ಬಡಾವಣೆಯಲ್ಲಿ ಪ್ರಾಧಿಕಾರದ ಕಲ್ಯಾಣ ಮಂಟಪವು ಸುಮಾರು 50 ವರ್ಷದಷ್ಟು ಹಳೆಯ ಕಟ್ಟಡವಾಗಿದ್ದು ಆಗಿಂದಾಗ್ಗೆ ದುರಸ್ಥಿ ಮಾಡಬೇಕಾಗಿರುತ್ತದೆ. ಈಗ ಇರುವ ಕಟ್ಟಡದ ಸಭಾಂಗಣದಲ್ಲಿ ಸುಮಾರು

200 ಮಂದಿ ಕುಳಿತುಕೊಳ್ಳಲು ಮಾತ್ರ ಸ್ಥಳವಕಾಶವಿರುತ್ತದೆ. ಸದರಿ ಕಲ್ಯಾಣ ಮಂಟಪದಿಂದ ಪ್ರಾಧಿಕಾರಕ್ಕೆ ವಾರ್ಷಿಕ ಸುಮಾರು ರೂ.4,20,000/– ಆದಾಯ ಬರುತ್ತಿದ್ದು ನಿರ್ವಹಣೆ ಹಾಗೂ ಪಾವತಿಗೆ ಸುಮಾರು ರೂ.2,02,000/– ಖರ್ಚು ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಹಾಗೂ ಪ್ರಾಧಿಕಾರದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಸಂಬಂಧ ಹಾಲೀ ಇರುವ ಕಲ್ಯಾಣ ಮಂಟಪವನ್ನು ತೆರವುಗೊಳಿಸಿ ಹೊಸದಾಗಿ ಒಂದು ಸುಸಜ್ಜಿತ ಕಲ್ಯಾಣ ಮಂಟಪವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ (ಪಿಪಿಪಿ) ನಿರ್ಮಿಸಲು ಡಿ.ಪಿ.ಆರ್ ತಯಾರಿಸಲು ರೂ.10.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

- ಸಾತಗಳ್ಳಿ ಬಸ್‌ಡಿಪೋ ನಿಲ್ದಾಣದ ಹಿಂಭಾಗದಲ್ಲಿರುವ ಪ್ರಾಧಿಕಾರದ ಭೂ ಪ್ರದೇಶದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಸಾರ್ವಜನಿಕ ಸಹಭಾಗಿತ್ವದಡಿಯಲ್ಲಿ (ಪಿಪಿಪಿ) ಕನ್ವೆನ್ಷನ್‌ಹಾಲ್ ನಿರ್ಮಾಣ ಮಾಡಲು ಸಾಂಕೇತಿಕವಾಗಿ ರೂ.10.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.
- ಮೈಸೂರು ನಗರದ ಹೊರವರ್ತುಲ ರಸ್ತೆಗೆ ಹೊಂದಿಕೊಂಡಂತೆ ಹಿನಕಲ್ ಗ್ರಾಮದ ಸರ್ವೆ ನಂಬರ್ 62, 47 / 3, 48/8 ಹಾಗೂ 49 / 1 ರ ಜಾಗದಲ್ಲಿ ಕನ್ವೆನ್ಷನ್ ಹಾಲ್ ನಿರ್ಮಾಣಕ್ಕಾಗಿ (ಸಾರ್ವಜನಿಕ ಸಹಭಾಗಿತ್ವದಲ್ಲಿ) ರೂ.10.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

### ಯೋಗ / ಧ್ಯಾನ ಮಂದಿರ ನಿರ್ಮಾಣ

ವಿಜಯನಗರ 1ನೇ ಹಂತದ ಕ್ರೀಡಾ ಸಂಕೀರ್ಣದಲ್ಲಿ ಸುಮಾರು 11 ಎಕರೆ ವಿಸ್ತೀರ್ಣವಿದ್ದು, ಅದರಲ್ಲಿ ಈಗ ಹಾಲಿ ಲಾನ್ ಟೆನ್ನಿಸ್ ಕೋರ್ಟ್, ಬಾಸ್ಕೆಟ್ ಬಾಲ್ ಕೋರ್ಟ್, ಜಿಮ್ನಾಷಿಯಂ ಹಾಲ್ ಹಾಗೂ ಆಟದ ಮೈದಾನ ನಿರ್ಮಾಣ ಮಾಡಲಾಗಿದ್ದು, ಸದರಿ ಕ್ರೀಡಾ ಸಂಕೀರ್ಣದ ಪೂರ್ವ ಭಾಗದ ಸುಮಾರು 1.00 ಎಕರೆ ವಿಸ್ತೀರ್ಣದ ಜಾಗದಲ್ಲಿ ಪಿ.ಪಿ.ಪಿ ಮಾದರಿಯಲ್ಲಿ ಈಜುಕೊಳ ನಿರ್ಮಾಣ ಮಾಡಲು ಉದ್ದೇಶಿಸಿದೆ.

ಕ್ರೀಡಾ ಸಂಕೀರ್ಣದ ಪಶ್ಚಿಮ ಭಾಗದ ಖಾಲಿ ಜಾಗದಲ್ಲಿ ಕ್ರೀಡೆಯ ಒಂದು ಭಾಗವಾಗಿ ಸಾರ್ವಜನಿಕರ ಅನುಕೂಲಕ್ಕಾಗಿ ಯೋಗಮಂದಿರವನ್ನು ಸುಮಾರು ರೂ. 100.00 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಈ ಸಾಲಿನಲ್ಲಿ ರೂ. 25.00 ಲಕ್ಷಗಳ ಅನುದಾನ ಕಾಯ್ದಿರಿಸಲಾಗಿದೆ.

### ಕ್ರೀಡಾಂಗಣ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಲಯ ಕಛೇರಿ–3 ರ ವ್ಯಾಪ್ತಿಯಲ್ಲಿ ಬರುವ ವಿಜಯನಗರ 4ನೇ ಹಂತ 2ನೇ ಘಟ್ಟ ಬಡಾವಣೆಯ ಬಸವನಹಳ್ಳಿ ಸರ್ವೇ ನಂ. 5 ಮತ್ತು 6 ರಲ್ಲಿ ಒಟ್ಟು 9 ಎಕರೆ 14 ಗುಂಟೆ ಪ್ರದೇಶವನ್ನು ಬಯಲು ಪ್ರದೇಶವೆಂದು ಸಿ.ಡಿ.ಪಿ. ನಕ್ಷೆಯಲ್ಲಿ ಗುರುತಿಸಲಾಗಿರುತ್ತದೆ. ವಿಜಯನಗರ 3ನೇ ಹಂತ ಬಡಾವಣೆಯಲ್ಲಿ ಒಟ್ಟು 3356 ನಿವೇಶನಗಳು ಮತ್ತು ವಿಜಯನಗರ 4ನೇ ಹಂತ, 1ನೇ ಘಟ್ಟ, 2ನೇ ಘಟ್ಟ ಮತ್ತು 3ನೇ ಘಟ್ಟಗಳಲ್ಲಿ ಪ್ರಾಧಿಕಾರದಿಂದ ಒಟ್ಟು 16 ಸಾವಿರ ನಿವೇಶನಗಳನ್ನು ರಚಿಸಲಾಗಿರುತ್ತದೆ. ಹಾಲಿ ವಿಜಯನಗರ 3ನೇ ಮತ್ತು 4ನೇ ಹಂತ ಬಡಾವಣೆಗಳಲ್ಲಿ ಸುಮಾರು 10 ಸಾವಿರ ಮನೆಗಳು ನಿರ್ಮಾಣವಾಗಿದ್ದು,

ಸುಮಾರು 90 ಸಾವಿರ ಜನಸಂಖ್ಯೆ ಹೊಂದಿರುತ್ತದೆ. ಸದರಿ ಬಡಾವಣೆಗಳಿಗೆ ಹೊಂದಿಕೊಂಡಂತೆ ಅಲ್ಲಿಯ ಸ್ಥಳೀಯ ನಿವಾಸಿಗಳ ಕ್ರೀಡಾ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಯಾವುದೇ ಆಟದ ಮೈದಾನವಾಗಲೀ ಅಥವಾ ಕ್ರೀಡಾ ಸಂಕೀರ್ಣವಾಗಲೀ ಇರುವುದಿಲ್ಲ. ಸದರಿ ಪ್ರದೇಶದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣ ಮಾಡುವುದರಿಂದ ಅಲ್ಲಿನ ನಾಗರೀಕರ ಮತ್ತು ಮಕ್ಕಳ ದೈಹಿಕ ಆರೋಗ್ಯ ವೃದ್ಧಿಸುವ ಜೊತೆಗೆ ಸಾರ್ವಜನಿಕರ ಸಾಮಾಜಿಕ ಬೆಳವಣಿಗೆಗೆ ಅನುಕೂಲವಾಗುವುದಲ್ಲದೇ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಇದರಿಂದ ಪ್ರಾಧಿಕಾರಕ್ಕೆ ಆದಾಯವನ್ನು ಸಹ ಕ್ರೂಢೀಕರಿಸಿದಂತಾಗುತ್ತದೆ. ಸದರಿ ಕಾಮಗಾರಿಯನ್ನು ರೂ.1000.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ಈ ಸಾಲಿನಲ್ಲಿ ರೂ.350.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

### ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನವನ್ನು ಅಭಿವೃದ್ಧಿಪಡಿಸುವುದು.

ಮೈಸೂರು ನಗರದ ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನವು ಸುಮಾರು 30 ಎಕರೆ ಪ್ರದೇಶ ಹೊಂದಿದ್ದು, ಪ್ರಾಧಿಕಾರದ ಆಸ್ತಿಯಾಗಿರುತ್ತದೆ. ಪ್ರತಿ ವರ್ಷವು ದಸರಾ ಕಾರ್ಯಕ್ರಮಗಳು ಈ ಮೈದಾನದಲ್ಲಿ ನಡೆಯುತ್ತಿದ್ದು ದೇಶ, ವಿದೇಶಗಳಿಂದ ಗಣ್ಯಾತೀಗಣ್ಯರು ದಸರಾ ಉತ್ಸವವನ್ನು ವೀಕ್ಷಿಸಲು ಆಗಮಿಸುತ್ತಿದ್ದು ಹಾಲಿ 32,000 ಆಸನಗಳ ಸಾಮರ್ಥ್ಯದ ಪ್ರಾಂಗಣವಿದ್ದು, ಮೈಸೂರು ದಸರಾ ನೋಡಲು ಪ್ರತಿ ವರ್ಷವೂ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಪಶ್ಚಿಮ ಭಾಗದ ಮುಖ್ಯ ವೇದಿಕೆಯ ಎಡ ಮತ್ತು ಬಲ ಭಾಗಗಳಲ್ಲಿ 8,000 ಆಸನ ಸಾಮರ್ಥ್ಯದಿಂದ 16,000 ಆಸನಗಳ ಸಾಮರ್ಥ್ಯವನ್ನು ಹೆಚ್ಚಿಸಲು (ಅಂದರೆ ಒಟ್ಟಾರೆ 40,000) ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.450.00 ಲಕ್ಷಗಳಾಗಿದ್ದು. ಪ್ರಸ್ತುತ ಸಾಲಿನಲ್ಲಿ ರೂ.150.00 ಲಕ್ಷಗಳನ್ನು ಕಾಯ್ದಿರಿಸಿದೆ.

### ಮಹಾಯೋಜನೆಯಲ್ಲಿ ಪ್ರಸ್ತಾಪಿಸಿರುವ ರಸ್ತೆಗಳ ಪೈಕಿ ರಚನೆಯಾಗದೆ ಉಳಿದಿರುವ ಭಾಗದ ರಸ್ತೆಗಳ ಅಭಿವೃದ್ಧಿ (Missing Links)

ಮಹಾಯೋಜನೆಯಲ್ಲಿ ನಗರದ ಮಟ್ಟ ಮತ್ತು ಹೊರಭಾಗದಲ್ಲಿ ಹಲವಾರು ಹೊಸ ರಸ್ತೆಗಳನ್ನು ಪ್ರಸ್ತಾಪಿಸಲಾಗಿರುತ್ತದೆ. ಆ ರಸ್ತೆಗಳ ಪೈಕಿ ಕೆಲವು ಭಾಗ ಪ್ರಾಧಿಕಾರದಿಂದ ರಚಿಸಿರುವ ಬಡಾವಣೆಯಲ್ಲಿ ಮತ್ತು ಪ್ರಾಧಿಕಾರದಿಂದ ಅನುಮೋದನೆಯಾದ ಬಡಾವಣೆಯಲ್ಲಿ ಅಭಿವೃದ್ಧಿಗೊಂಡಿರುತ್ತದೆ. ಆದರೆ, ಆ ರಸ್ತೆಗಳ ಕೆಲವು ಭಾಗಗಳು ಅಭಿವೃದ್ದಿಯಾಗದೇ ಇರುವುದರಿಂದ ನಗರದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಂಪರ್ಕವಿರುವುದಿಲ್ಲ ಮತ್ತು ಈ ರಸ್ತೆಗಳು ಪರಿಣಾಮಕಾರಿಯಾಗಿ ಸಾರ್ವಜನಿಕರಿಗೆ ಉಪಯೋಗವಾಗುತ್ತಿಲ್ಲ. ಇದನ್ನು ಹಾಗೆಯೇ ಬಿಟ್ಟಲ್ಲಿ ಆ ರಸ್ತೆಗಳ ಮಾರ್ಗದಲ್ಲಿ ಕೆಲವು ಅಭಿವೃದ್ಧಿಗಳು ಬಂದಲ್ಲಿ ಈ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು ಮುಂದೆ ಕಷ್ಟವಾಗುತ್ತದೆ. ಆದ್ದರಿಂದ ಈ ರೀತಿ ರಚನೆಯಾಗದೇ ಬಿಟ್ಟು ಹೋದ ರಸ್ತೆಗಳ ಭಾಗವನ್ನು ಅಭಿವೃದ್ಧಿಗೊಳಪಡಿಸುವುದು. ಇಂದಿನ ಅತೀ ಅವಶ್ಯಕತೆಗಳಲ್ಲಿಂದಾಗಿರುತ್ತದೆ. ಹಾಗಾಗಿ ಈ ಕೆಳಕಂಡ ರಸ್ತೆಗಳನ್ನು (**Missing Link**) ಅಭಿವೃದ್ದಿಪಡಿಸಲು ಈ ಸಾಲಿನಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

- ❖ ಜೆ.ಪಿ.ನಗರ ರಿಂಗ್ ರಸ್ತೆಯಿಂದ (ಅಕ್ಕಮಹಾದೇವಿ ರಸ್ತೆ) ಮಂಡಕಳ್ಳಿ ಬಿ.ಇ.ಎಂ.ಎಲ್ ಬಡಾವಣೆಯ ಮಹಾಯೋಜನೆಯ 18 ಮೀ ಅಗಲದ ಪ್ರಮುಖ ರಸ್ತೆ ಅಗಲೀಕರಣದ ಅಭಿವೃದ್ಧಿ ಕಾಮಗಾರಿಗಾಗಿ ರೂ.100.00 ಲಕ್ಷಗಳನ್ನು ಕಾಯ್ದಿರಿಸಿದೆ.
- ❖ ಶ್ರೀರಾಂಪುರ 2ನೇ ಹಂತದ ಆದಿಚುಂಚನಗಿರಿ ರಸ್ತೆಯನ್ನು ನಾಯ್ಡು ಸ್ಟೋರ್ಸ್‌ನಿಂದ ಮಾನಂದವಾಡಿ ರಸ್ತೆವರೆಗೆ ವಿಸ್ತರಿಸುವ ಮಹಾಯೋಜನೆಯ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ರೂ.100.00 ಲಕ್ಷಗಳನ್ನು ಕಾಯ್ದಿರಿಸಿದೆ.
- ❖ ಶ್ರೀರಾಂಪುರ 1ನೇ ಹಂತದ ಶನಿದೇವರ ದೇವಸ್ಥಾನದಿಂದ ರಿಂಗ್ ರಸ್ತೆವರೆಗಿನ ಮಹಾಯೋಜನೆಯ ಸಂಪರ್ಕ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಾಗಿ ರೂ.75.00 ಲಕ್ಷಗಳನ್ನು ಕಾಯ್ದಿರಿಸಿದೆ.
- ❖ ಹೊರವರ್ತುಲ ರಸ್ತೆಯಿಂದ ಧನಗಳ್ಳಿ ಬಡಾವಣೆಗೆ ಸೇರುವ 80 ಅಡಿ ಅಗಲದ ಮಹಾಯೋಜನೆಯ ರಸ್ತೆಯ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಾಗಿ ರೂ.25.00 ಲಕ್ಷಗಳನ್ನು ಕಾಯ್ದಿರಿಸಿದೆ. (ಸರಪಳಿ : 2.10 ಕಿ.ಮೀ ನಿಂದ 5.30 ಕಿ.ಮೀವರೆಗೆ)
- ❖ ವಿದ್ಯಾರಣ್ಯಪುರಂನ 4ನೇ ಮುಖ್ಯ ರಸ್ತೆಯನ್ನು 18 ಮೀ ಅಗಲಕ್ಕೆ ಮೇಲ್ದರ್ಜೆಗೇರಿಸುವ ಮಹಾಯೋಜನೆಯ ಸಂಪರ್ಕ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಾಗಿ ರೂ.125.00 ಲಕ್ಷಗಳನ್ನು ಕಾಯ್ದಿರಿಸಿದೆ.
- ❖ ಮೈಸೂರು ನಗರದ ನ್ಯೂ ಕಾಂತರಾಜ್ ಅರಸ್ ರಸ್ತೆಯ ಮುಂದುವರೆದ ಭಾಗ ನಿರ್ಮಾಣ ಕಾಮಗಾರಿಗಾಗಿ ರೂ.50.00 ಲಕ್ಷಗಳನ್ನು ಕಾಯ್ದಿರಿಸಿದೆ. (ಮಹಾ ಯೋಜನೆ ರಸ್ತೆ)
- ❖ ಮೈಸೂರು ನಗರದ ಬೋಗಾದಿ ಕ್ರೈಸ್ಟ್ ಪಬ್ಲಿಕ್ ಶಾಲೆಯಿಂದ ಮೈಸೂರು ಬೋಗಾದಿ ಗದ್ದಿಗೆ ಮುಖ್ಯ ರಸ್ತೆವರೆಗೆ 80 ಅಡಿ ಅಗಲದ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ರೂ.10.00 ಲಕ್ಷಗಳನ್ನು ಕಾಯ್ದಿರಿಸಿದೆ.
- ❖ ಮೈಸೂರು ನಗರದ ದಟ್ಟಗಳ್ಳಿ 3ನೇ ಹಂತದ ಬಡಾವಣೆಯ ನೇತಾಜಿ ವೃತ್ತದಿಂದ ದಟ್ಟಗಳ್ಳಿ ಸರ್ವೆ ನಂ. 170/ 1 ಮತ್ತು 238ರ ಮುಖಾಂತರ ಹಾದು ಹೋಗಿ ಹೊರವರ್ತುಲ ರಸ್ತೆಗೆ ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ರೂ.10.00 ಲಕ್ಷಗಳನ್ನು ಕಾಯ್ದಿರಿಸಿದೆ.
- ❖ ಮೈಸೂರು ನಗರದ ದಟ್ಟಗಳ್ಳಿ 3ನೇ ಹಂತ ಬಡಾವಣೆಯ ಪಿ.ಕೆ.ವಿ. ಆಚಾರ್ಯ ಸಭಾ ಭವನದ ಬಳಿ ಇರುವ 80 ಅಡಿ ರಸ್ತೆ ತ್ರಿವೇಣಿ ವೃತ್ತದ ಮುಖಾಂತರ ಹಾದು ಹೋಗಿ ಶಾರದಾ ಪಬ್ಲಿಕ್ ಶಾಲೆಗೆ ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ರೂ.15.00 ಲಕ್ಷಗಳನ್ನು ಕಾಯ್ದಿರಿಸಿದೆ.
- ❖ ಹಿನಕಲ್ ಗ್ರಾಮ ವ್ಯಾಪ್ತಿಯಲ್ಲಿ ವಿಜಯನಗರ 3ನೇ ಹಂತದಲ್ಲಿರುವ ಹಾಲಿ 24.00 ಮೀ. ರಸ್ತೆಯನ್ನು ಹುಣಸೂರು ರಸ್ತೆಯವರೆಗೆ ವಿಸ್ತರಿಸುವ ಕಾಮಗಾರಿಗಾಗಿ ರೂ.175.00 ಲಕ್ಷಗಳನ್ನು ಕಾಯ್ದಿರಿಸಿದೆ.
- ❖ ಮೈಸೂರು ನಗರದ ಮೈಸೂರು–ಹುಣಸೂರು ರಸ್ತೆಯ ಚದುರಂಗ ರಸ್ತೆಯಿಂದ ವಿಜಯಶ್ರೀಪುರ ಸರ್ವೆ ನಂಬರ್ 01 ರ ಮೂಲಕ ಕಾಳಿದಾಸ ರಸ್ತೆಗೆ ಸೇರುವ ರಸ್ತೆಯನ್ನು ನಿರ್ಮಾಣ ಮಾಡುವ ಕಾಮಗಾರಿಗಾಗಿ ರೂ.50.00 ಲಕ್ಷಗಳನ್ನು ಕಾಯ್ದಿರಿಸಿದೆ.

❖ ಮೈಸೂರು ನಗರ ಜಾವಾ ಫ್ಯಾಕ್ಟರಿ ಅಂಡರ್‌ಬ್ರಿಡ್ಜ್ ನಿಂದ ಗುಮ್ನಾಮ್–ಶಾ–ವಲಿ ಗೋರಿಯ ಮಾರ್ಗವಾಗಿ ಹೊರವರ್ತುಲ ರಸ್ತೆಯವರೆಗೆ (ರೈಲ್ವೆ ಟ್ರ್ಯಾಕ್ ಪಕ್ಕದಲ್ಲಿ ಸಿ.ಡಿ.ಪಿ ರಸ್ತೆ) ಗುಡ್ಸ್‌ಶೆಡ್ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗಾಗಿ ರೂ.100.00 ಲಕ್ಷಗಳನ್ನು ಕಾಯ್ದಿರಿಸಿದೆ.

❖ ಮೈಸೂರು ನಗರ ಉದಯಗಿರಿ ಬಡಾವಣೆಯ ಎಂಜಿ ರಸ್ತೆಯನ್ನು ಉತ್ತರಾಭಿಮುಖವಾಗಿ ದೇವನೂರು ಕೆರೆ ದಂಡೆಗೆ (ರಾಜೀವ್ ನಗರ, ಎನ್.ಆರ್. ಮೊಹಲ್ಲಾ ರಸ್ತೆ) ಸಂಪರ್ಕ ಕಲ್ಪಿಸುವ ಕಾಮಗಾರಿಗಾಗಿ ರೂ.30.00 ಲಕ್ಷಗಳನ್ನು ಕಾಯ್ದಿರಿಸಿದೆ.

❖ ಮೈಸೂರು ನಗರ ಜಿಲಾನಿ ಪೆಟ್ರೋಲ್ ಬಂಕ್ ಹಿಂಭಾಗ, (ಮಿಲೇನಿಯಂ) ವೃತ್ತದ ಹಿಂಭಾಗ, ರಾಜೇಂದ್ರ ಮಾರ್ಗವಾಗಿ ಅಜೀಜ್ ಹೋಟೆಲ್ ಮುಂಭಾಗದವರೆಗೆ ರಸ್ತೆ ಅಗಲೀಕರಣ ಕಾಮಗಾರಿಗಾಗಿ ರೂ.30.00 ಲಕ್ಷಗಳನ್ನು ಕಾಯ್ದಿರಿಸಿದೆ.

❖ ಮೈಸೂರು ಮಹದೇವಪುರ ಮುಖ್ಯರಸ್ತೆಯ ಸೈಯದ್ ಅಬ್ದುಲ್ ರೆಹಮಾನ್ ರಸ್ತೆಯನ್ನು ರಿಂಗ್ ರೋಡ್ ತನಕ ಅಭಿವೃದ್ಧಿಪಡಿಸುವ ಕಾಮಗಾರಿಗಾಗಿ ರೂ.75.00 ಲಕ್ಷಗಳನ್ನು ಕಾಯ್ದಿರಿಸಿದೆ.

❖ ಲಲಿತಾದ್ರಿನಗರ ಉತ್ತರ ಬಡಾವಣೆಯಿಂದ ಲಾಲ್‌ಬಹದ್ದೂರ್ ಶಾಸ್ತ್ರಿನಗರ ಬಡಾವಣೆಗೆ ಸೇರುವ ಮಹಾಯೋಜನೆಯಂತೆ ಉದ್ದೇಶಿತ ರಸ್ತೆ ನಿರ್ಮಾಣ ಕಾಮಗಾರಿಗಾಗಿ ರೂ.25.00 ಲಕ್ಷಗಳನ್ನು ಕಾಯ್ದಿರಿಸಿದೆ.

❖ ದಟ್ಟಗಳ್ಳಿ 3ನೇ ಹಂತದಿಂದ ಹಾಲಿ 18.00ಮೀ ಅಗಲದ ರಸ್ತೆಯನ್ನು ಕೇರ್ಗಳ್ಳಿ ಗ್ರಾಮದ ಸರ್ವೆನಂ.54, 55ರ ಮೂಲಕ ಬ್ಯಾಂಕ್ ಅಂಡ್ ಪಬ್ಲಿಕ್ ಸೆಕ್ಟರ್ ಖಾಸಗಿ ಬಡಾವಣೆಗೆ ಸೇರುವ ರಸ್ತೆ ಅಭಿವೃದ್ಧಿ ಹಾಗೂ ಶಾರದ ಪಬ್ಲಿಕ್ ಶಾಲೆಯ ಮುಂಭಾಗದ ಹಾಲಿ 24.00 ಮೀಟರ್ ಅಗಲದ ರಸ್ತೆಯು ಮುಂದುವರೆಸಿ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ರೂ.50.00 ಲಕ್ಷಗಳನ್ನು ಕಾಯ್ದಿರಿಸಿದೆ.

❖ ಆರ್.ಟಿನಗರ ಬಡಾವಣೆಯು 30.00 ಮೀ ಅಗಲದ ರಸ್ತೆ ಹಾಗೂ ಹೊರ ವರ್ತುಲ ರಸ್ತೆ ಸೇರುವ ಜಾಗದ ಬಳಿ ಬರುವ ಲಿಂಗಾಂಬುದಿ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ವರ್ತುಲ ರಸ್ತೆಯ ಸೇವಾ ರಸ್ತೆ (ಮಿಸ್ಸಿಂಗ್‌ಲಿಂಕ್) ಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಾಗಿ ರೂ.10.00 ಲಕ್ಷಗಳನ್ನು ಕಾಯ್ದಿರಿಸಿದೆ.

❖ ಲಿಂಗಾಂಬುದಿ ಗ್ರಾಮ ವ್ಯಾಪ್ತಿಯಲ್ಲಿ ಹಾಲಿ 18.00 ಮೀ ರಸ್ತೆ ಹಾಗೂ 24.00 ಮೀ ರಸ್ತೆಗಳನ್ನು ವಿಶ್ವವಿದ್ಯಾನಿಲಯ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆ ಮತ್ತು ಎಸ್.ಬಿ.ಎಂ ಮತ್ತು ಇತರೆ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆಗಳಲ್ಲಿ ಈಗಾಗಲೇ ಅಭಿವೃದ್ಧಿಪಡಿಸಲಾಗಿದ್ದು, ಈ ಎರಡೂ ರಸ್ತೆಗಳು ಮಹಾಯೋಜನೆಯಂತೆ ಹೊರವರ್ತುಲ ರಸ್ತೆಗೆ ಸಂಪರ್ಕಿಸುವ ರಸ್ತೆ ಕಾಮಗಾರಿಗಾಗಿ ರೂ.10.00 ಲಕ್ಷಗಳನ್ನು ಕಾಯ್ದಿರಿಸಿದೆ.

❖ ಮೈಸೂರು ಬೆಂಗಳೂರು ರಸ್ತೆಯಿಂದ ಮೈಸೂರು – ಮಹದೇವಪುರ ರಿಂಗ್ ರಸ್ತೆಯ ಮಧ್ಯಭಾಗದಲ್ಲಿ ನಾರಾಯಣ ಹೃದಯಾಲಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಂತರ ದೇವನೂರು 3ನೇ ಹಂತ ಹಾಗೂ 2ನೇ ಹಂತ

ಸಂಪರ್ಕಕ್ಕಾಗಿ ರೋಡ್ ಅಂಡರ್ ಬ್ರಿಡ್ಜ್ ನಿರ್ಮಾಣವನ್ನು (ಪಿಪಿಪಿ) ಮಾದರಿಯಲ್ಲಿ ಕೈಗೊಳ್ಳಲು ರೂ.10.00 ಲಕ್ಷಗಳನ್ನು ಕಾಯ್ದಿರಿಸಿದೆ.

### ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ

ಪ್ರಾಧಿಕಾರದ ಬಡಾವಣೆಗಳಿಗೆ ಹಾಗೂ ಇನ್ನಿತರೆ ಬಡಾವಣೆಗಳಲ್ಲಿ ಘನ ತ್ಯಾಜ್ಯಗಳನ್ನು ಸಮರ್ಪಕ ನಿರ್ವಹಣೆಗಾಗಿ ಮಹಾನಗರ ಪಾಲಿಕೆಗೆ ವಂತಿಕೆ ನೀಡುವ ಸಂಬಂಧ ರೂ.500.00 ಲಕ್ಷಗಳನ್ನು ಕಾಯ್ದಿರಿಸಿದೆ.

### ತ್ವರಿತವಾಗಿ ಖಾತಾ ವರ್ಗಾವಣೆ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನೊಂದಾಯಿತ ಕ್ರಯದಂತೆ ಖಾತಾ ವರ್ಗಾವಣೆ, ನೊಂದಾಯಿತ ದಾನ ಪತ್ರದಂತೆ ಖಾತಾ ವರ್ಗಾವಣೆ, ಖಾಸಗಿ ಬಡಾವಣೆಯ ನಿವೇಶನಗಳ ಇ–ಖಾತಾ ವರ್ಗಾವಣೆ ಹಾಗೂ ಮನೆ ಕಂದಾಯ ನಿಗಧಿಪಡಿಸುವ ಸಂಬಂಧ ಅರ್ಜಿದಾರರು ನಿಗಧಿತ ಅಗತ್ಯವಾದ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ, ಸದರಿ ನಿವೇಶನಗಳ ಮೂಲ ಕಡತಗಳು ಲಭ್ಯವಿದ್ದು ಕಾನೂನಾತ್ಮವಾಗಿರುವುದನ್ನು ಪರಿಶೀಲಿಸಿ 5 ದಿನಗಳೊಳಗಾಗಿ ಖಾತಾ ವರ್ಗಾವಣೆಗೆ ಕ್ರಮವಹಿಸಲು ಯೋಜನೆಯನ್ನು ರೂಪಿಸಲಾಗುವುದು.

### ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ತಂತ್ರಾಂಶಗಳನ್ನು ಡಿಜಿಟಲೀಕರಣ ಮಾಡುವ ಬಗ್ಗೆ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾದ ಬಡಾವಣೆ ಮತ್ತು ಖಾಸಗಿ ಬಡಾವಣೆಗಳ ಖಾತಾ ನೋಂದಾವಣೆ / ವರ್ಗಾವಣೆ, ಕಂದಾಯ ನಿಗಧಿ ಪಡಿಸುವಿಕೆ, ಕ್ರಯ ಪತ್ರ ನೀಡುವುದು ಈ ರೀತಿಯ ಎಲ್ಲಾ ನಾಗರೀಕ ಸನ್ನದುಗಳ ವಿತರಣೆಯನ್ನು ಇದುವರೆಗೆ ಅರ್ಜಿದಾರರಿಂದ ಲಿಖಿತ ಅರ್ಜಿಯನ್ನು ಪಡೆದು ವಿಶೇಷ ತಹಶೀಲ್ದಾರರು ಮತ್ತು ಅಧೀನ ಸಿಬ್ಬಂದಿಗಳು ಕಡತಗಳ ಮೂಲಕ ಖಾತಾ ವರ್ಗಾವಣೆ ಮತ್ತು ಕ್ರಯ ಪತ್ರ, ಕಂದಾಯ ನಿಗಧಿ ಪಡಿಸುವಿಕೆಯನ್ನು ಮ್ಯಾನ್ಯುವಲ್ ಪ್ರಕ್ರಿಯೆಯಲ್ಲಿ ಮಾಡಲಾಗುತ್ತಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಖಾತಾ ನೋಂದಾವಣೆ / ವರ್ಗಾವಣೆ, ಕಂದಾಯ ನಿಗಧಿ ಪಡಿಸುವಿಕೆ, ಕ್ರಯ ಪತ್ರ ನೀಡುವ ಅರ್ಜಿಗಳನ್ನು ಕ್ಷಿಪ್ರವಾಗಿ ವಿಲೇವಾರಿ ಮಾಡಲು ಏಕಗವಾಕ್ಷಿ ಯೋಜನೆಯನ್ನು ಗಣಕೀಕರಣದ ಮೂಲಕ ಪ್ರತ್ಯೇಕವಾದ ತಂತ್ರಾಂಶವನ್ನು ಅಳವಡಿಕೊಳ್ಳುವ ಯೋಜನೆಯನ್ನು ರೂಪಿಸುವ ಸಂಬಂಧ 2019–20 ನೇ ಸಾಲಿನಲ್ಲಿ ರೂ. 25.00 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ.

ಅದರಂತೆ 2020–21 ನೇ ಸಾಲಿನಲ್ಲಿ ಖಾತಾ ನೋಂದಾವಣೆ / ವರ್ಗಾವಣೆ, ಕಂದಾಯ ನಿಗಧಿ ಪಡಿಸುವಿಕೆ, ಕ್ರಯ ಪತ್ರ ನೀಡುವ ಅರ್ಜಿಗಳನ್ನು ಕ್ಷಿಪ್ರವಾಗಿ ವಿಲೇವಾರಿ ಮಾಡಲು ಏಕಗವಾಕ್ಷಿ ಯೋಜನೆಯನ್ನು ಗಣಕೀಕರಣದ ಮೂಲಕ ಪ್ರತ್ಯೇಕವಾದ ತಂತ್ರಾಂಶವನ್ನು ಅಳವಡಿಕೊಳ್ಳುವ ಯೋಜನೆಗೆ ಸಂಬಂಧಿಸಿದಂತೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯು ಅಂತಿಮ ಹಂತದಲ್ಲಿ ಇದ್ದು, 2020–21 ನೇ ಸಾಲಿನಲ್ಲಿ ಕಾರ್ಯಗತ ಮಾಡಲು ಅಗತ್ಯ ಕ್ರಮವಹಿಸಲಾಗುತ್ತಿದೆ. ಮುಂದುವರದಂತೆ ಪ್ರಾಧಿಕಾರದ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸಲು ಹಾಗೂ ಇ–ಖಾತಾ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲು ಅಂದಾಜು ಮೊತ್ತ ರೂ.30.00 ಲಕ್ಷಗಳು ಅವಶ್ಯವಿದ್ದು, ಪ್ರಸ್ತುತ 2020–21 ನೇ ಸಾಲಿನಲ್ಲಿ ಇ–ಖಾತಾ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲು ಟೆಂಡರ್ ಮೂಲಕ ಅಯಾ ಸಾಫ್ಟ್ ಸಂಸ್ಥೆಗೆ ನೀಡಲಾಗಿದೆ.

## ಬಿಡಿ ನಿವೇಶನಗಳ ಬಗ್ಗೆ

ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಾರ್ವಜನಿಕರಿಗೆ ವಿವಿಧ ಅಳತೆಗಳ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಹಂಚಿಕೆಯಾದ ನಿವೇಶನಗಳಲ್ಲಿ ಮಂಜೂರಾತಿ ನಿಯಮಾವಳಿಯಂತೆ ನಿಗಧಿತ ಅವಧಿಯೊಳಗೆ ಹಣ ಪಾವತಿಸದೇ, ಮಂಜೂರಾತಿ ಪತ್ರ ಪಡೆಯದೇ, ಸ್ವಾಧೀನ ಪತ್ರ ಪಡೆಯದೇ ಇರುವ ಪ್ರಕರಣಗಳನ್ನು ಗುರುತಿಸಿದ್ದು, ಇಂತಹ ನಿಯಮ ಉಲ್ಲಂಘಿಸಿರುವ ನಿವೇಶನಗಳ ಕಡತಗಳನ್ನು ಈ ಕೆಳಕಂಡ ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡಂತೆ ತಂಡಗಳನ್ನು ರಚಿಸಿ ಅಭಿಲೇಖಾಲಯದಲ್ಲಿ ಸಂಬಂಧಪಟ್ಟ ಲೆಡ್ಜರ್‌ನಲ್ಲಿ ಪರಿಶೀಲಿಸಿಕೊಂಡು ಸದರಿ ನಿವೇಶನಗಳಿಗೆ ಉಪ–ನೊಂದಣಾಧಿಕಾರಿಗಳಿಂದ ಇ.ಸಿ ಪಡೆದು ಮಂಜೂರಾತಿ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ವಲಯ | |
|---|---|---|
| 1 | 1 & 3 | ವಿಶೇಷ ತಹಶೀಲ್ದಾರ್ ಹಾಗೂ ಅಧೀನ ಸಿಬ್ಬಂದಿಗಳು |
| 2 | 2 & 4 | ವಿಶೇಷ ತಹಶೀಲ್ದಾರ್ ಹಾಗೂ ಅಧೀನ ಸಿಬ್ಬಂದಿಗಳು |
| 3 | 5ಎ & 5ಬಿ | ವಿಶೇಷ ತಹಶೀಲ್ದಾರ್ ಹಾಗೂ ಅಧೀನ ಸಿಬ್ಬಂದಿಗಳು |
| 4 | 6, 7 & 8 | ವಿಶೇಷ ತಹಶೀಲ್ದಾರ್ ಹಾಗೂ ಅಧೀನ ಸಿಬ್ಬಂದಿಗಳು |

ಮೇಲ್ಕಂಡ ತಂಡಗಳು ಪ್ರಸ್ತುತ ಪ್ರಾಧಿಕಾರದ ಅಭಿಲೇಖಾಲಯದಿಂದ ಹಂತ ಹಂತವಾಗಿ 6126 ನಿವೇಶನಗಳ ಕಡತಗಳನ್ನು ಹೊರ ತೆಗೆದಿದ್ದು, ಈವರೆವಿಗೂ 3059 ವಿವಿಧ ವಲಯಗಳ ನಿವೇಶನಗಳ ಕಡತಗಳನ್ನು ಪರಿಶೀಲಿಸಿ ಅಂತಿಮವಾಗಿ ರದ್ದುಪಡಿಸಬೇಕಾಗಿರುವ ನಿವೇಶನಗಳಿಗೆ ವಲಯಾಧಿಕಾರಿಗಳಿಂದ ಸ್ಥಳ ತನಿಖಾ ವರದಿ ಮತ್ತು ಸಿ.ಡಿ ವರದಿಯನ್ನು ಪಡೆಯಲಾಗಿರುತ್ತದೆ. ಅದರಂತೆ ಮೊದಲನೇ ಹಂತದಲ್ಲಿ 1109 ವಿವಿಧ ಅಳತೆಗಳ ನಿವೇಶನಗಳು ಹಾಗೂ ಎರಡನೇ ಹಂತದಲ್ಲಿ 367 ವಿವಿಧ ಅಳತೆಗಳ ನಿವೇಶನಗಳನ್ನು ಗುರುತಿಸಿ ರದ್ದತಿಗೆ ಕ್ರಮವಹಿಸಲಾಗಿರುತ್ತದೆ. ಈ ಸಂಬಂಧ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸ್ವೀಕರಿಸುವ ಸಲುವಾಗಿ ದಿನಾಂಕ 06.08.2019 ರಂದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿರುತ್ತದೆ. ಸಾರ್ವಜನಿಕರಿಂದ ಒಟ್ಟು 6 ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಸ್ವೀಕೃತವಾದ 6 ಆಕ್ಷೇಪಣೆಗಳಿಗೆ ಸಮಂಜಸ ಹಿಂಬರಹಗಳನ್ನು ನೀಡಿ ವಿಲೇಗೊಳಿಸಲಾಗಿದೆ. ಅಂತಿಮವಾಗಿ ಒಟ್ಟು 1476 ನಿವೇಶನಗಳನ್ನು ರದ್ದುಗೊಳಿಸಲಾಗಿದ್ದು, ಪ್ರಸ್ತುತ ಒಟ್ಟು 1476 ರದ್ದತಿ ನಿವೇಶನಗಳ ಪೈಕಿ 221 ನಿವೇಶನಗಳು ಭೌತಿಕವಾಗಿ / ಇತರೆ ಕಾರಣಗಳಿಂದಾಗಿ ಲಭ್ಯವಿರುವುದಿಲ್ಲ, ಉಳಿದ 1255 ಬಿಡಿ ನಿವೇಶನಗಳು ಲಭ್ಯವಿದ್ದು, ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖೆ | ವಲಯ ಕಛೇರಿ | ಅಳತೆ | ರದ್ದತಿಯಾಗಿರುವ ನಿವೇಶನಗಳ ಸಂಖ್ಯೆ | ಕ್ರಮ ಸಂಖ್ಯೆ | ವಲಯ ಕಛೇರಿ | ಅಳತೆ | ರದ್ದತಿಯಾಗಿರುವ ನಿವೇಶನಗಳ ಸಂಖ್ಯೆ |
|---|---|---|---|---|---|---|---|
| 1 | ವಲಯ ಕಛೇರಿ–1 | 20X30 | 35 | 2 | ವಲಯ ಕಛೇರಿ–2 | 20X30 | 13 |
| | | 30X40 | 44 | | | 30X40 | 0 |
| | | 40X60 | 16 | | | 40X60 | 1 |
| | | 50X80 | 1 | | | 50X80 | 0 |
| | | Odd Sites | 11 | | | Odd Sites | 2 |
| 3 | ವಲಯ ಕಛೇರಿ–3 | 20X30 | 89 | 4 | ವಲಯ ಕಛೇರಿ–4 | 20X30 | 4 |
| | | 30X40 | 75 | | | 30X40 | 7 |
| | | 40X60 | 55 | | | 40X60 | 1 |
| | | 50X80 | 28 | | | 50X80 | 1 |
| | | Odd Sites | 0 | | | Odd Sites | 1 |
| 5 | ವಲಯ ಕಛೇರಿ– 5ಎ & 5ಬಿ | 20X30 | 125 | 6 | ವಲಯ ಕಛೇರಿ–6 | 20X30 | 44 |
| | | 30X40 | 125 | | | 30X40 | 13 |
| | | 40X60 | 213 | | | 40X60 | 21 |
| | | 50X80 | 56 | | | 50X80 | 5 |
| | | Odd Sites | 0 | | | Odd Sites | 0 |
| 7 | ವಲಯ ಕಛೇರಿ–8 | 20X30 | 0 | | | 20X30 | 111 |
| | | 30X40 | 0 | | | 30X40 | 67 |
| | | 40X60 | 0 | | | 40X60 | 66 |
| | | 50X80 | 0 | | | 50X80 | 25 |
| | | Odd Sites | 0 | | | Odd Sites | 0 |
| ಒಟ್ಟು | | | | | | | **1255** |

ಮೇಲ್ಕಂಡಂತೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ, ಕರ್ನಾಟಕ ನಗರಾಭಿವೃದ್ಧಿ (ನಿವೇಶಗಳ ಹಂಚಿಕೆ) ನಿಯಮಗಳು 1991ರ ನಿಯಮ 19(1) ರ ಮಂಜೂರಾತಿ ಷರತ್ತಿನಂತೆ ನಿಗಧಿತ ಅವಧಿಯೊಳಗೆ ಪೂರ್ಣ ಹಣ ಪಾವತಿಸದ ಕಾರಣ ಹಾಗೂ ಇತರೆ ಕಾರಣಗಳಿಂದ ಉಲ್ಲಂಘನೆಯಾಗಿರುವ ನಿವೇಶನಗಳನ್ನು ಗುರುತಿಸಿ ರದ್ದುಗೊಳಿಸಲಾಗಿದೆ. ಸದರಿ ರದ್ದತಿ ನಿವೇಶನಗಳನ್ನು ನಿಯಮ–6 ರನ್ವಯ ಬಿಡಿ ನಿವೇಶನಗಳನ್ನಾಗಿ ಪರಿಗಣಿಸಿ, ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ / 291 / ಅಪ್ರಾವ / 98, ದಿನಾಂಕ 24.11.2000 ರ ಮಾರ್ಗಸೂಚಿಗಳನ್ನು ಅನುಸರಿಸಿ, ವಿಲೇ ಮಾಡಲು ಸರ್ಕಾರಕ್ಕೆ ವರದಿ ಸಲ್ಲಿಸಲು ಹಾಗೂ ಪ್ರಾಧಿಕಾರದ ಸಭೆಗೆ ವಿಷಯವನ್ನು ಮಂಡಿಸಲು ಕ್ರಮವಹಿಸಬೇಕಾಗಿರುತ್ತದೆ.

### ಸಿಬ್ಬಂದಿ ಮತ್ತು ಆಡಳಿತ ವೆಚ್ಚಗಳು

- ಪ್ರಾಧಿಕಾರದ ನೌಕರರ ಸಂಘಕ್ಕೆ ಪ್ರಾಧಿಕಾರದ ನೌಕರರು ನಿವೃತ್ತಿಯಾದ ಸಂಧರ್ಭದಲ್ಲಿ ಸಂಘದ ವತಿಯಿಂದ ಗೌರವ ಧನವಾಗಿ ರೂ.25,000/– ಸಾವಿರ ರೂಪಾಯಿಗಳನ್ನು ನೀಡುತ್ತಿದ್ದು, ಅದರ ವಂತಿಕೆಯ ರೂಪದಲ್ಲಿ ಪ್ರಾಧಿಕಾರದ ವತಿಯಿಂದ ರೂ.10.00 ಲಕ್ಷ ರೂಪಾಯಿಗಳನ್ನು ಪ್ರಾಧಿಕಾರದ ಸಂಘಕ್ಕೆ ನೌಕರರ ಹಿತದೃಷ್ಟಿಯಿಂದ ನೀಡಲು ಹಾಗೂ ನೀಡಿದ ಮೊತ್ತಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟು ನೀಡಲು ಕ್ರಮ ಕೈಗೊಳ್ಳಲಾಗುವುದು.

  ಪ್ರಾಧಿಕಾರದ ನಿವೃತ್ತಿ ನೌಕರರಿಗೆ ನಿಯಮಾನುಸಾರವಾಗಿ ನೀಡಬೇಕಾಗಿರುವ ನಿವೃತ್ತಿ ವೇತನವನ್ನು ಪ್ರಾಧಿಕಾರವು ಇಲ್ಲಿಯವರೆಗೆ ನೀಡುತ್ತಾ ಬಂದಿದ್ದು, ಇದರ ಸಲುವಾಗಿ ರೂ.500.00 ಲಕ್ಷಗಳನ್ನು ಪ್ರತ್ಯೇಕವಾಗಿ ನಿಶ್ಚಿತ ಠೇವಣಿಯಾನ್ನಾಗಿ ಕಾಯ್ದಿರಿಸಲು ಕ್ರಮವಹಿಸಲಾಗುವುದು.

  ಸಿಬ್ಬಂದಿ ವೆಚ್ಚ ಮತ್ತು ಆಡಳಿತ, ಸಾದಿಲ್ವಾರು ವೆಚ್ಚಕ್ಕಾಗಿ ರೂ. 3000.00 ಲಕ್ಷಗಳನ್ನು ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಲಾಗಿದೆ.

### II. ನಿಧಿ :– ಕೆರೆ ಪುನರುಜ್ಜೀವನ

1. ದೇವನೂರು ಕೆರೆ ಅಭಿವೃದ್ಧಿಪಡಿಸಲು ಈಗಾಗಲೇ ಪ್ರಸ್ತುತ ಸಮಗ್ರ ಯೋಜನೆ ತಯಾರಿಸಿ, ಈ ಯೋಜನೆ ಪ್ರಕಾರ 16.52 ಕೋಟಿ ರೂಗಳಿಗೆ ಅಭಿವೃದ್ಧಿಪಡಿಸಲು ಅಂದಾಜು ತಯಾರಿಸಲಾಗಿದೆ. ಕೆರೆ ಅಭಿವೃದ್ಧಿಪಡಿಸಲು ಕೆರೆ ಅಭಿವೃದ್ಧಿ ಪ್ರಾಧಿಕಾರದ ಅನುದಾನಕ್ಕೆ ಈಗಾಗಲೇ ಪ್ರಾಧಿಕಾರದಿಂದ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಆದರೆ ಕೆರೆ ಅಭಿವೃದ್ಧಿ ಪ್ರಾಧಿಕಾರದಿಂದ ಕೇವಲ ಕೆರೆ ಸಂರಕ್ಷಣೆಗಾಗಿ ತಂತಿಬೇಲಿ ನಿರ್ಮಿಸಲು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಭರಿಸುವುದಾಗಿ ತಿಳಿಸಿರುವುದರಿಂದ ಮುಂದೆ ಪ್ರಾಧಿಕಾರದ ವತಿಯಿಂದ ಮೊದಲನೇ ಹಂತದಲ್ಲಿ ಈ ಕೆರೆಯ ಸುತ್ತ ರಸ್ತೆ ಹಾಗೂ ಬಂಡ್‌ನ್ನು ನಿರ್ಮಿಸುವ ಸಲುವಾಗಿ ರೂ.50.00 ಲಕ್ಷಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.

2. ಬೋಗಾದಿ ಆಂತ್ರೋಪಾಲಜಿಕಲ್ ಸರ್ವೆ ಆಫ್ ಇಂಡಿಯಾದ ಮುಂಭಾಗವಿರುವ ಬೋಗಾದಿ ಕೆರೆಯು ಅತ್ಯಂತ ಪುರಾತತ್ವ ಇತಿಹಾಸ ಹೊಂದಿರುವ ಕೆರೆಯಾಗಿರುತ್ತದೆ. ಈ ಕೆರೆಯು ಮರಿಯಪ್ಪನ ಕೆರೆಯೆಂದು ಪ್ರಖ್ಯಾತಿಯಾಗಿರುತ್ತದೆ. ಸದರಿ ಕೆರೆಗೆ ಬೋಗಾದಿ ಗ್ರಾಮದಿಂದ ವಿಜಯನಗರ 4ನೇ ಹಂತ ಮತ್ತು ವಿಜಯನಗರ 3ನೇ ಹಂತದ ಬಡಾವಣೆಗಳಿಂದ ಬರುವಂತಹ ಮಳೆ ನೀರನ್ನು ಶೇಖರಿಸುವ ಕೆರೆಯಾಗಿರುತ್ತದೆ. ಸದರಿ ಕೆರೆಯು ಸುಮಾರು 60 ಎಕರೆ ವಿಸ್ತೀರ್ಣವಿದ್ದು, ಮಳೆಗಾಲದಲ್ಲಿ ಕೆರೆಯು ಕೋಡಿ ಬಿದ್ದಾಗ ಸುತ್ತಮುತ್ತಲಿನ ಬಡಾವಣೆಗಳಿಗೆ ನೀರು ನುಗ್ಗಿದ ಪ್ರಕರಣಗಳು ಕಂಡು ಬಂದಿರುತ್ತದೆ ಈ ಘಟನೆಯು 2016–17 ಮತ್ತು 2018–19ನೇ ಸಾಲುಗಳಲ್ಲಿನ ಭಾರಿ ಮಳೆಯಿಂದಾಗಿ ಸುತ್ತಮುತ್ತಲಿನ ಬಡಾವಣೆಗಳಿಗೆ ನೀರು ನುಗ್ಗಿರುವುದು ಖಾತ್ರಿಯಾಗಿರುತ್ತದೆ. ಕೆರೆಯು ಕೋಡಿ ಬಿದ್ದ ಕಾರಣದಿಂದ ಬೋಗಾದಿ ಗದ್ದಿಗೆ ಮುಖ್ಯ ರಸ್ತೆಯು ಜಲಾವೃತವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಕೆರೆಯ ಸುತ್ತಮುತ್ತಲಿನ ಬಡಾವಣೆ ನಿವಾಸಿಗಳು, ಸಾರ್ವಜನಿಕರು ಹಾಗೂ ಸ್ಥಳಿಯ ಜನ ಪ್ರತಿನಿಧಿಗಳು ಈ ಕೆರೆಯನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿರುತ್ತಾರೆ. ಈ

ಕೆರೆಯನ್ನು ಅಭಿವೃದ್ಧಿಪಡಿಸುವುದರಿಂದ, ಕೆರೆಯನ್ನು ಸಂರಕ್ಷಿಸಿದಂತಾಗುತ್ತದೆ. ಕೆರೆಯ ಸುತ್ತ ರಸ್ತೆ ಹಾಗೂ ಬಂಡನ್ನು ನಿರ್ಮಿಸಿ ಕೆರೆಯಲ್ಲಿ ಹೆಚ್ಚಿನ ನೀರನ್ನು ಶೇಖರಿಸಬಹುದಾಗಿರುತ್ತದೆ. ಬೋಗಾದಿ ಕೆರೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ರೂ.15.00 ಲಕ್ಷಗಳಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

3. ಲಿಂಗಾಬುದಿ ಕೆರೆ ಅಭಿವೃದ್ಧಿ ಪಡಿಸಲು ರೂ.50.00 ಲಕ್ಷಗಳನ್ನು ಕಾಯ್ದಿರಿಸಿದೆ.

4. ವಿಜಯನಗರ 3ನೇ ಹಂತ ಮತ್ತು 4ನೇ ಹಂತಕ್ಕೆ ಹೊಂದಿಕೊಂಡತಿರುವ ಹಿನಕಲ್ ಕೆರೆ ಅಭಿವೃದ್ಧಿಗಾಗಿ ರೂ.25.00 ಲಕ್ಷಗಳನ್ನು ಕಾಯ್ದಿರಿಸಿದೆ.

## III. ನಿಧಿ:– ಉದ್ಯಾನವನ ಮತ್ತು ತೆರೆದ ಪ್ರದೇಶಗಳ ಅಭಿವೃದ್ಧಿ

ಸದರಿ ಸಾಲಿನಲ್ಲಿ ಯಾವುದೇ ವೆಚ್ಚ ಭರಿಸಲು ಉದ್ದೇಶಿಸಿರುವುದಿಲ್ಲ

## IV. ನಿಧಿ:– ಕೊಳಚೆ ಪ್ರದೇಶಗಳ ಅಭಿವೃದ್ಧಿ

1. ಮೈಸೂರು ನಗರ ವ್ಯಾಪ್ತಿಯಲ್ಲಿ ಬರುವ ಭರತ್‌ನಗರ ಬಡಾವಣೆಯಲ್ಲಿ ಒಳಚರಂಡಿ ಹಾಗೂ ಕುಡಿಯುವ ನೀರಿನ ಕೊಳಾಯಿಗಳ ದುರಸ್ಥಿ ಕಾಮಗಾರಿಗಾಗಿ ರೂ.8.00 ಲಕ್ಷಗಳನ್ನು ಕಾಯ್ದಿರಿಸಿದೆ.
2. ಮೈಸೂರು ನಗರ ವ್ಯಾಪ್ತಿಯಲ್ಲಿ ಬರುವ ಭರತ್‌ನಗರ ಬಡಾವಣೆಯಲ್ಲಿ ರಸ್ತೆ ಹಾಗು ಚರಂಡಿ ದುರಸ್ಥಿ ಕಾಮಗಾರಿಗಾಗಿ ರೂ.8.00 ಲಕ್ಷಗಳನ್ನು ಕಾಯ್ದಿರಿಸಿದೆ.

## V. ನಿಧಿ:– ಅಭಿವೃದ್ಧಿ ನಿಧಿ – 1

ಬಡಾವಣೆಯ ಅಭಿವೃದ್ಧಿ ಯೋಜನೆಗಾಗಿ ಅಧ್ಯಯನ, ಹೊಸ ಬಡಾವಣೆ ಅಭಿವೃದ್ಧಿ ಯೋಜನೆ ಹಾಗೂ ಭೂ ಸ್ವಾಧೀನ ವೆಚ್ಚ, ಭೂ ಮಾಲೀಕರ ಜಂಟಿ ಸಹಯೋಗದಲ್ಲಿ ಹೊಸ ಬಡಾವಣೆಗಳ ನಿರ್ಮಾಣ, ಗುಂಪು ಮನೆಗಳ ನಿರ್ಮಾಣ, ಪ್ರಾಧಿಕಾರದ ಉದ್ಯಾನವನಗಳ ಅಭಿವೃದ್ಧಿ ಹಾಗೂ ಇತರೆ ಹೊಸ ಯೋಜನೆಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿದ್ದು, ಅಭಿವೃದ್ಧಿ ನಿಧಿ – 1ರಲ್ಲಿ ವೆಚ್ಚ ಭರಿಸಲು ಪ್ರಸ್ತುತ ಸಾಲಿನಲ್ಲಿ ರೂ.21554.23 ಲಕ್ಷಗಳನ್ನು ಕಾಯ್ದಿರಿಸಿದೆ. ಈ ನಿಧಿಯಡಿ ಈ ಕೆಳಕಂಡ ಪ್ರಮುಖ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

### ರೈತರ ಸಹಭಾಗಿತ್ವದೊಂದಿಗೆ ಹೊಸ ಬಡಾವಣೆಗಳ ನಿರ್ಮಾಣ

ಮೈಸೂರು ನಗರದ ಮಳಲವಾಡಿ ಗ್ರಾಮದ ಸರ್ವೆ ನಂ.33 / 1, 34 / 3 ಮತ್ತು ಸರ್ವೆ ನಂ.36 & 37 ರ 3 ಎಕರೆ 15 ಗುಂಟೆ ಗೋಮಾಳ ಸೇರಿ ಹಾಗೂ ಚಿಕ್ಕಹರದನಹಳ್ಳಿ ಗ್ರಾಮದ ಸರ್ವೆ ನಂ.42,43,44 ರ 3ಎಕರೆ ಮತ್ತು ಇತರೆ ಕಡೆಗಳಲ್ಲಿ ಒಟ್ಟಾರೆ 20 ಎಕರೆ 12 ಗುಂಟೆ ಪ್ರದೇಶದಲ್ಲಿ ಜಮೀನಿನ ಮಾಲೀಕರು ಪ್ರಾಧಿಕಾರದ ಯೋಜನೆಗೆ ಆಸಕ್ತಿ ತೋರಿದ್ದು, ಸಹಭಾಗಿತ್ವ 50:50ರ ಅನುಪಾತದಡಿ ವಸತಿ ಬಡಾವಣೆ ರಚಿಸಲು ಉದ್ದೇಶಿಸಲಾಗಿದೆ.

ಮೈಸೂರು ತಾಲ್ಲೂಕು ಧನಗಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಒಟ್ಟು 47 ಎಕರೆ ಪ್ರದೇಶದಲ್ಲಿ ಜಮೀನಿನ ಮಾಲೀಕರು ಪ್ರಾಧಿಕಾರದ ಯೋಜನೆಗೆ ಆಸಕ್ತಿ ತೋರಿದ್ದು, ಸಹಭಾಗಿತ್ವ 50:50 ಅನುಪಾತದಡಿ ವಸತಿ ಬಡಾವಣೆ ರಚಿಸಲು ಉದ್ದೇಶಿಸಲಾಗಿದೆ.

ಮೈಸೂರು ತಾಲ್ಲೂಕು ಜಯಪುರ ಹೋಬಳಿ, ದಾರಿಪುರ ಗ್ರಾಮದ ಸರ್ವೆ ನಂ.68ರಲ್ಲಿ 7 ಎಕರೆ, ಸರ್ವೆ ನಂ.69ರಲ್ಲಿ 7 ಎಕರೆ, ಸರ್ವೆ ನಂ.70 ರಲ್ಲಿ 5 ಎಕರೆ 30 ಗುಂಟೆ ಒಟ್ಟು 20 ಎಕರೆ ಪ್ರದೇಶದಲ್ಲಿ ಜಮೀನಿನ ಮಾಲೀಕರು ಪ್ರಾಧಿಕಾರದ ಯೋಜನೆಗೆ ಆಸಕ್ತಿ ತೋರಿದ್ದು, ಸಹರ್ಭಾಗಿತ್ವ 50:50ರ ಅನುಪಾತದಡಿ ವಸತಿ ಬಡಾವಣೆ ರಚಿಸಲು ಉದ್ದೇಶಿಸಲಾಗಿದೆ.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಕಸಬಾ ಹೋಬಳಿ ಕಳಲೆ ಗ್ರಾಮದ ಸ.ನಂ.333 / 2, 333 / 3, 334 / 2, 337 / 4, 338 / 2, 338 / 3, 339 / 2, 339 / 3, 340, 341 ಮತ್ತು 342 ರಲ್ಲಿ 22.5 ಎಕರೆ ಪ್ರದೇಶದಲ್ಲಿ ಜಮೀನಿನ ಮಾಲೀಕರು ಪ್ರಾಧಿಕಾರದ ಯೋಜನೆಗೆ ಆಸಕ್ತಿ ತೋರಿದ್ದು, ಸಹಭಾಗಿತ್ವ 50:50 ರ ಅನುಪಾತದಡಿ ವಸತಿ ಬಡಾವಣೆ ರಚಿಸಲು ಉದ್ದೇಶಿಸಲಾಗಿದೆ.

### ಹೊಸ ಬಡಾವಣೆಗಳು

ಹೊಸ ಬಡಾವಣೆಗಳಾದ ಲಾಲ್ ಬಹದ್ದೂರ್ ಶಾಸ್ತ್ರಿನಗರ 2ನೇ ಹಂತ, ಶಾಂತವೇರಿ ಗೋಪಾಲಗೌಡ ನಗರ 2ನೇ ಹಂತ, ಸ್ವರ್ಣ ಜಯಂತಿ ನಗರ, ನಾಲ್ವಡಿ ಕೃಷ್ಣರಾಜ ಒಡೆಯರ್ ನಗರ, ಲಲಿತಾದ್ರಿನಗರ 2ನೇ ಹಂತ, ಆರ್.ಟಿ.ನಗರ 2ನೇ ಹಂತ ಈ ಜಮೀನುಗಳ ಜೆ.ಎಂ.ಸಿ. ಕಾರ್ಯ ಪೂರ್ಣಗೊಂಡಿದ್ದು, ಬಡಾವಣೆ ನಿರ್ಮಾಣ ಪ್ರಸ್ತಾವನೆಯನ್ನು ನಗರಾಭಿವೃದ್ಧಿ ಕಾಯ್ದೆ ಸೆಕ್ಷನ್ 18(3) ರಂತೆ ಸರ್ಕಾರದಿಂದ ಅನುಮೋದನೆ ಪಡೆಯಲು ಕ್ರಮವಹಿಸಲಾಗಿರುತ್ತದೆ. ಸದರಿ ಯೋಜನೆಗಳಿಗೆ ಪ್ರಸ್ತುತ ಸಾಲಿನಲ್ಲಿ ರೂ.1000.00ಲಕ್ಷಗಳ ಅನುದಾನ ಕಾಯ್ದಿರಿಸಲಾಗಿದೆ.

**ಅಭಿವೃದ್ಧಿ ನಿಧಿ–1ರ ಅಡಿ ಮೇಲಿನ ಹೊಸ ಬಡಾವಣೆ ನಿರ್ಮಾಣ ಯೋಜನೆಗಳ ಜೊತೆಗೆ ಸಾರ್ವಜನಿಕ ಹಾಗೂ ನಗರದ ವ್ಯವಸ್ಥಿತ ಬೆಳವಣಿಗೆಯ ದೃಷ್ಟಿಯಿಂದ ಈ ಕೆಳಕಂಡ ಕೆಲವು ಪ್ರಮುಖ ಕಾಮಗಾರಿಗಳನ್ನು ಈ ಸಾಲಿನಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.**

- ❖ ವಿಜಯನಗರ 4ನೇ ಹಂತ 2ನೇ ಘಟ್ಟ ಬಡಾವಣೆಯಲ್ಲಿ ಬರುವ ಪಾರ್ಕ್ ನಂ.15 ಅನ್ನು ಹೈಟೆಕ್ ಪಾರ್ಕ್ ಆಗಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು 2020–21 ನೇ ಸಾಲಿನಲ್ಲಿ ಸುಮಾರು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.
- ❖ ವಿಜಯನಗರ 3ನೇ ಹಂತ 'ಡಿ' ಬ್ಲಾಕ್ ಬಡಾವಣೆಯಲ್ಲಿರುವ ಪಾರ್ಕ್ ನಂ.04 ನ್ನು ಹೈಟೆಕ್ ಪಾರ್ಕ್ ಆಗಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು 2020–21 ನೇ ಸಾಲಿನಲ್ಲಿ ಸುಮಾರು ರೂ.30.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.
- ❖ ದೇವನೂರು 2ನೇ ಹಂತ 1ನೇ ಘಟ್ಟ ನಿ.ಸಂ.1555/ 1 ರಿಂದ 1555/ 15 ರವರೆಗೆ ಬಾಕಿ ಉಳಿದಿರುವ ಅಭಿವೃದ್ಧಿ ಕಾಮಗಾರಿಗಾಗಿ ರೂ.25.00 ಲಕ್ಷಗಳನ್ನು ಕಾಯ್ದಿರಿಸಿದೆ.

- ಕೆಸರೆ 3ನೇ ಹಂತ ಬಡಾವಣೆಯಲ್ಲಿ ಖಾಲಿ ಇರುವ ಬಯಲು ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ರಚಿಸಲು ರೂ.20.00 ಲಕ್ಷಗಳನ್ನು ಕಾಯ್ದಿರಿಸಿದೆ.
- ದೇವನೂರು 3ನೇ ಹಂತ ಬಡಾವಣೆಯಲ್ಲಿ ಖಾಲಿ ಇರುವ ಬಯಲು ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ರಚಿಸಲು ರೂ.20.00 ಲಕ್ಷಗಳನ್ನು ಕಾಯ್ದಿರಿಸಿದೆ.
- ಮೈಸೂರು ನಗರದ ಹೊರವರ್ತುಲ ರಸ್ತೆಯಲ್ಲಿ ಬರುವ ರೈಲ್ವೆ ಕೆಳ ಸೇತುವೆ (RUB) ಗಳ ಅಗಲೀಕರಣಕ್ಕಾಗಿ ರೂ.40.00 ಲಕ್ಷಗಳನ್ನು ಕಾಯ್ದಿರಿಸಿದೆ.

### ಭೂಸ್ವಾಧೀನ ವೆಚ್ಚ

ಪ್ರಾಧಿಕಾರದ ವಿವಿಧ ಬಡಾವಣೆಗಳ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳಿಗೆ ಹೆಚ್ಚುವರಿ ಪರಿಹಾರಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ಘನ ಉಚ್ಚನ್ಯಾಯಾಲಯ ಮತ್ತು ಸಿವಿಲ್ ನ್ಯಾಯಾಲಯಗಳು ಭೂ ಸ್ವಾಧೀನ ಕಾಯ್ದೆ ಕಲಂ 18ರ ಅಡಿಯಲ್ಲಿ ನಿಗಧಿ ಪಡಿಸುವ ಹೆಚ್ಚುವರಿ ಭೂ ಪರಿಹಾರ ಹಾಗೂ ಭೂ ಸ್ವಾಧೀನ ಕಾಯ್ದೆ ಕಲಂ 28(ಎ) ರ ಅಡಿಯಲ್ಲಿ ವಿಶೇಷ ಭೂ ಸ್ವಾಧೀನಾಧೀಕಾರಿಗಳು ನಿಗಧಿ ಪಡಿಸುವ ಭೂ ಪರಿಹಾರ ಒಳಗೊಂಡಂತೆ ಭೂ ಸ್ವಾಧೀನವಾದ ಈ ಗ್ರಾಮಗಳಲ್ಲಿ ಆಲನಹಳ್ಳಿ, ಬೆಲವತ್ತ, ದಟ್ಟಗಳ್ಳಿ, ಹಂಚ್ಯಾ, ಕೇರ್ಗಳ್ಳಿ, ಹೊಸಹುಂಡಿ, ಕೆಸರೆ, ಕುಪ್ಪಲೂರು, ಲಲಿತಾದ್ರಿಪುರ, ನಾಡನಹಳ್ಳಿ, ರಮ್ಮನಹಳ್ಳಿ, ಸರ್ಕಾರಿ ಉತ್ತನಹಳ್ಳಿ ಸಾತಗಳ್ಳಿ, ಯಾಂದಳ್ಳಿ, ದೇವನೂರು, ಹಿನಕಲ್ ಹಾಗೂ ಇತರೆ ಗ್ರಾಮಗಳ ಜಮೀನುಗಳಿಗೆ ಭೂ ಪರಿಹಾರವಾಗಿ ಈ ಸಾಲಿನಲ್ಲಿ ರೂ. 10000.00 ಲಕ್ಷಗಳನ್ನು ಕಾಯ್ದಿರಿಸಿದೆ.

### ನೀರು ಸರಬರಾಜು ಯೋಜನೆ

ಹಳೇ ಉಂಡವಾಡಿ ಗ್ರಾಮದ ಬಳಿ ಕಾವೇರಿ ನದಿ ಮೂಲದಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಹಾಯೋಜನೆ – 2031ರಲ್ಲಿ ಹೊಸ ಬಡಾವಣೆಗಳಿಗೆ, ಪ್ರಾಧಿಕಾರದ ಬಡಾವಣೆಗಳಿಗೆ ಸಮಗ್ರವಾಗಿ ನೀರು ಪೂರೈಕೆ ಮಾಡಲು ಅನುಕೂಲವಾಗುವಂತೆ ಪ್ರಾಂತೀಯ ಜಲ ಸಂಗ್ರಹಗಾರಗಳಿಂದ ಉಂಡುವಾಡಿ ಸಗಟು ನೀರು ಸರಬರಾಜು ಯೋಜನೆ ಅನುಷ್ಠಾನಗೊಂಡ ನಂತರ ಮಹಾಯೋಜನೆ – 2031ರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು, ಪ್ರಾಧಿಕಾರದ ಅನುಮೋದಿತ ಬಡಾವಣೆಗಳು, ಪ್ರಾಧಿಕಾರದಿಂದ ರಚನೆಗೊಂಡಿರುವ ಬಡಾವಣೆಗಳು ಮತ್ತು ಮುಂದೆ ರಚನೆಗೆ ಒಳಪಡುವ ಹಾಗೂ ಅನುಮೋದನೆಗೆ ಒಳಪಡುವ ಪ್ರಾಧಿಕಾರದ ಬಡಾವಣೆಗಳು ಹಾಗೂ ಅನುಮೋದನೆಗೆ ಒಳಪಡುವ ಇತರೆ ಬಡಾವಣೆಗಳಿಗೆ ನೀರು ಸರಬರಾಜು ಮಾಡುವ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ.ನಅಇ15ಯುಡಬ್ಲ್ಯೂಎಸ್ 2018 ಬೆಂಗಳೂರು ದಿನಾಂಕ.21.02.2019ರಂತೆ ಪ್ರಾಧಿಕಾರದ ವಂತಿಕೆಯಾಗಿ ಸದರಿ ಸಾಲಿನಲ್ಲಿ ರೂ.2500.00 ಲಕ್ಷಗಳನ್ನು ಕಾಯ್ದಿರಿಸಿದೆ.

## VI. ನಿಧಿ:– ಅಭಿವೃದ್ಧಿ ನಿಧಿ – 2

ಪ್ರಾಧಿಕಾರದ ವ್ಯಾಪ್ತಿಯ ಪ್ರದೇಶಗಳಲ್ಲಿ ಸಮತೋಲಿತ ಬೆಳವಣಿಗೆಯ ದೃಷ್ಟಿಯಿಂದ ಈಗಾಗಲೇ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಕೆಲವೊಂದು ಕಾಮಗಾರಿಗಳನ್ನು ಪೂರ್ಣಗೊಳಿಸಿ ನಗರ ಪಾಲಿಕೆಗೆ ಹಸ್ತಾಂತರಿಸಬೇಕಾಗಿದೆ. ಇನ್ನೂ ಕೆಲವು ಬಡಾವಣೆಗಳಲ್ಲಿ ರಸ್ತೆಗಳ ಅಭಿವೃದ್ಧಿ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರು ಸರಬರಾಜು, ಹಾಗೂ ವಿದ್ಯುತ್ ಕಾಮಗಾರಿಗಳು ಸೇರಿದಂತೆ ಬಡಾವಣೆಗಳ ಸಮಗ್ರ ಅಭಿವೃದ್ಧಿಗಾಗಿ ಅಭಿವೃದ್ಧಿ ನಿಧಿ – 2ರಲ್ಲಿ ವೆಚ್ಚ ಭರಿಸಲು ಪ್ರಸ್ತುತ ಸಾಲಿನಲ್ಲಿ ರೂ.4054.29 ಲಕ್ಷಗಳನ್ನು ಕಾಯ್ದಿರಿಸಿದೆ. ಈ ನಿಧಿಯಡಿ ಈ ಕೆಳಕಂಡ ಪ್ರಮುಖ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

- ನಂಜನಗೂಡು, ದೇವೀರಮ್ಮನಹಳ್ಳಿ ರಸ್ತೆಯಿಂದ ಲಿಂಕ್ ರಸ್ತೆವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಅಭಿವೃದ್ಧಿ ಮತ್ತು ಚರಂಡಿ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ನಂಜನಗೂಡು, ದೇವೀರಮ್ಮನಹಳ್ಳಿ ಲಿಂಕ್ ರಸ್ತೆಯಿಂದ ಹಂಡುವಿನಹಳ್ಳಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಅಭಿವೃದ್ಧಿ ಮತ್ತು ಚರಂಡಿ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಮೈಸೂರು–ನಂಜನಗೂಡು ಮುಖ್ಯ ರಸ್ತೆಯಿಂದ ರಾಮಸ್ವಾಮಿ ಬಡಾವಣೆ ಮುಖಾಂತರ ಸಂಪರ್ಕ ರಸ್ತೆ ಅಭಿವೃದ್ದಿ ಕಾಮಗಾರಿಯನ್ನು ರೂ.20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಮಾನಂದವಾಡಿ ರಸ್ತೆಯಿಂದ ನಂಜನಗೂಡು ರಸ್ತೆವರೆಗೆ (ಗುರುಪಾದಸ್ವಾಮಿ ರಸ್ತೆ) ಅಭಿವೃದ್ಧಿ ಕಾಮಗಾರಿಯನ್ನು ರೂ.30.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಜೆ.ಪಿ.ನಗರ ಕೊನೆ ಬಸ್ ನಿಲ್ದಾಣದಿಂದ ನವೋದಯ ಬಡಾವಣೆ ರೈಲ್ವೆ ಬ್ರಿಡ್ಜ್‌ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ನಂಜನಗೂಡು ಪಟ್ಟಣದ ಶಂಕರಪುರ ಹೊಸ ಬಡಾವಣೆಯ ವ್ಯಾಪ್ತಿಯಲ್ಲಿ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ರೂ.10.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ನಂಜನಗೂಡು ಪಟ್ಟಣದ ಶಂಕರಪುರ ಹೊಸ ಬಡಾವಣೆಯ ವ್ಯಾಪ್ತಿಯಲ್ಲಿ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಯನ್ನು ರೂ.10.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಮೈಸೂರು ನಗರದ ಸಿ.ಎಫ್.ಟಿ.ಆರ್.ಐ. ಬಡಾವಣೆಯಲ್ಲಿ ಪಾರ್ಕ್ ಅಭಿವೃದ್ಧಿ ಕಾಮಗಾರಿಯನ್ನು ರೂ.10.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಮೈಸೂರು ನಗರದ ಬೋಗಾದಿ ಗ್ರಾಮದ ಮಾನಸ ಆಸ್ಪತ್ರೆ ಮುಂಭಾಗದಲ್ಲಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಕಾಲೋನಿಯಲ್ಲಿ ರಸ್ತೆ ಮತ್ತು ಸಿ.ಸಿ.ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ರೂ.30.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

- ಮೈಸೂರು ನಗರದ ದಾಸನಕೊಪ್ಪಲು ಗ್ರಾಮದ ದಕ್ಷಿಣ ಭಾಗದ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಕಾಲೋನಿಯ ಬಳಿಯಿರುವ ಎಸ್.ಟಿ.ಪಿ.ಯಿಂದ ಯು.ಜಿ.ಡಿ. ಔಟ್‌ಫಾಲ್ ಪೈಪ್ ಲೈನ್ ಅಳವಡಿಸುವ ಕಾಮಗಾರಿಯನ್ನು ರೂ.10.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಮೈಸೂರು ನಗರದ ಗಣಗರ ಹುಂಡಿ ಗ್ರಾಮದಲ್ಲಿ ಸೆಪ್ಟಿಕ್ ಟ್ಯಾಂಕ್ ನಿರ್ಮಾಣ ಕಾಮಗಾರಿಯನ್ನು ರೂ.10.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ವಿಜಯನಗರ 3ನೇ ಹಂತ 1ನೇ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ವಿಜಯನಗರ 3ನೇ ಹಂತ ಎ1 ಬ್ಲಾಕ್‌ನಲ್ಲಿ ಬರುವ ಒಳಚರಂಡಿ ಕಾಮಗಾರಿಯನ್ನು ರೂ.20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ವಿಜಯನಗರ 4ನೇ ಹಂತ 1ನೇ ಘಟ್ಟದಲ್ಲಿ ವಿವಿಧ ರಸ್ತೆಗಳಲ್ಲಿ ಅಡ್ಡ ಮೋರಿ ನಿರ್ಮಾಣ ಕಾಮಗಾರಿಯನ್ನು ರೂ.20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.(250 ಮೀ.)
- ವಿಜಯನಗರ 4ನೇ ಹಂತ 3ನೇ ಘಟ್ಟ ನಿ.ಸಂ.60 ರ ಬಳಿ ಮತ್ತು ವಿಜಯನಗರ 4ನೇ ಹಂತ 1ನೇ ಘಟ್ಟ ಬಡಾವಣೆಯಲ್ಲಿ ಬಿದ್ದುಹೋಗಿರುವ ಅಡ್ಡ ಮೋರಿಗಳ ದುರಸ್ಥಿ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ವಿಜಯನಗರ 4ನೇ ಹಂತ 3ನೇ ಘಟ್ಟ ಬಡಾವಣೆಯ ಸುಸಜ್ಜಿತ ಚಿತಾಗಾರದ ಹತ್ತಿರ ದೊಡ್ಡ ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ರೂ.20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ವಿಜಯನಗರ 4ನೇ ಹಂತ 2ನೇ ಘಟ್ಟ ಬಡಾವಣೆಯ ಆರ್.ಎಂ.ಪಿ. ವೃತ್ತದಿಂದ ಹುಣಸೂರು ರಸ್ತೆಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಬೋಗಾದಿ–ಬೆಳವಾಡಿ–ಹುಣಸೂರು ರಸ್ತೆಯ ಬಸವನಹಳ್ಳಿಗೆ 24.00 ಮೀ. ರಸ್ತೆಯನ್ನು ವಿಸ್ತರಿಸುವುದು, ಭೂಸ್ವಾಧೀನ ಹಾಗೂ ಬಸವನಹಳ್ಳಿ ಸರ್ಕಾರಿ ಶಾಲೆಯನ್ನು ಸ್ಥಳಾಂತರಿಸುವ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಹುಯಿಲಾಳು ಗ್ರಾಮದಲ್ಲಿ ಎಸ್.ಟಿ.ಪಿ. ಹಾಗೂ ಒಳಚರಂಡಿ ನಿರ್ಮಾಣ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಹುಣಸೂರು ರಸ್ತೆಯಿಂದ ಯೋಗನರಸಿಂಹ ದೇವಸ್ಥಾನದ ಮೂಲಕ ರಿಂಗ್ ರಸ್ತೆಗೆ ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.150.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ತ್ರಿನೇತ್ರ ವೃತ್ತದಿಂದ ಕೃಷ್ಣದೇವರಾಯ ವೃತ್ತದ ಮೂಲಕ ರಿಂಗ್ ರಸ್ತೆ ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.150.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

- ಕೃಷ್ಣದೇವರಾಯ ವೃತ್ತದಿಂದ ಸಂಗಮ್ ಸರ್ಕಲ್ ಮೂಲಕ ಸಂಕ್ರಾಂತಿ ವೃತ್ತದವರೆಗಿನ ರಸ್ತೆ ಅಭಿವೃದ್ದಿ ಕಾಮಗಾರಿಯನ್ನು ರೂ.100.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಕೆ.ಆರ್.ಎಸ್ ರಸ್ತೆಯಿಂದ ಬಸವನಗುಡಿ ಮುಖಾಂತರ ಕುವೆಂಪು ವೃತ್ತಕ್ಕೆ ಸೇರುವ ರಸ್ತೆ ಅಭಿವೃದ್ದಿ ಪಡಿಸುವ ಕಾಮಗಾರಿಯನ್ನು ರೂ.90.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಮೈಸೂರು ನಗರ ಬನ್ನಿಮಂಟಪ 'ಎ' ಕೈಗಾರಿಕಾ ಬಡಾವಣೆಯ ಶ್ರೀನಿವಾಸ ಚಿತ್ರ ಮಂದಿರದಿಂದ ಮಂಜುನಾಥ ಎಂಟರ್ ಪ್ರೈಸಸ್ ಸಗಟು ಸೀಮೆಎಣ್ಣೆ ಕೇಂದ್ರದ ಮೂಲಕ ಹಾದು ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಬನ್ನಿಮಂಟಪ 'ಎ' ಕೈಗಾರಿಕಾ ಬಡಾವಣೆಯ ನಿವೇಶನ ಸಂಖ್ಯೆ 58 ರಿಂದ 73ರ ವರೆಗೆ ದೊಡ್ಡ ಮಳೆ ನೀರಿನ ಚರಂಡಿವರೆಗೆ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಬೃಂದಾವನ ಬಡಾವಣೆಯ ಗುರುದ್ವಾರದ ಪಕ್ಕದಲ್ಲಿರುವ ಪ್ರಾಧಿಕಾರದ ಜಾಗವನ್ನು ಉದ್ಯಾವನವನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ರೂ.30.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಮೈಸೂರು–ಬೆಂಗಳೂರು ರಸ್ತೆಯ ಬನ್ನಿಮಂಟಪ 'ಬಿ' ಬಡಾವಣೆ ಸಿದ್ದಿಖಿಮೊಹಲ್ಲಾ ಮುಂಭಾಗ ಸೇವಾ ರಸ್ತೆಯನ್ನು ನೇರ ರಸ್ತೆಯಾಗಿ ಪರಿವರ್ತನೆ ಮಾಡಿ ಅಭಿವೃದ್ದಿ ಪಡಿಸುವ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಮೈಸೂರು ನಗರ ಬೆಲವತ್ತ ಬಡಾವಣೆಯ ಒಳಚರಂಡಿ, ಸೆಪ್ಟಿಕ್ ಟ್ಯಾಂಕ್ ಆಳವಡಿಸುವ ಕಾಮಗಾರಿಯನ್ನು ರೂ.20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ರಾಜೀವ ನಗರದಿಂದ ಕೆಸರೆ ಸಂಪರ್ಕ ರಸ್ತೆ ಹಾಗೂ ಅಬ್ದುಲ್ ರೆಹಮಾನ್ ರಸ್ತೆಯಿಂದ ನೂತನ ಪಿಯು ಕಾಲೇಜು ಪಕ್ಕದಿಂದ ಇಂಜಿನಿಯರಿಂಗ್ ಕಾಲೇಜು ವರೆಗೆ (ಕೆಸರೆ) ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಮೈಸೂರು ತಾಲ್ಲೂಕು ರಮ್ಮನಹಳ್ಳಿ ಗ್ರಾಮದಲ್ಲಿ ಯು.ಜಿ.ಡಿ (ಒಳಚರಂಡಿ) ಸಂಪರ್ಕ, ಸೆಪ್ಟಿಕ್ ಟ್ಯಾಂಕ್ ಕಲ್ಪಿಸುವ ಕಾಮಗಾರಿಯನ್ನು ರೂ.60.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಕೆಸರೆ ಗ್ರಾಮದಲ್ಲಿ ಬಾಕಿ ಇರುವ ಒಳಚರಂಡಿ ಸಂಪರ್ಕ ಹಾಗೂ ಸೆಪ್ಟಿಕ್ ಟ್ಯಾಂಕ್ ನಿರ್ಮಿಸುವ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಲಾಲ್ ಬಹದ್ದೂರ್‌ಶಾಸ್ತ್ರಿ ನಗರ ಬಡಾವಣೆಯ ಆಯ್ದಭಾಗಗಳಲ್ಲಿ ರಸ್ತೆ ಮರುಡಾಂಬರೀಕರಣ ಕಾಮಗಾರಿಯನ್ನು ರೂ.20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

- ಲಲಿತಾದ್ರಿನಗರ ಬಡಾವಣೆಯ ಆಯ್ದಭಾಗಗಳಲ್ಲಿ ರಸ್ತೆ ಮರುಡಾಂಬರೀಕರಣ ಕಾಮಗಾರಿಯನ್ನು ರೂ.20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಲಲಿತಾದ್ರಿಪುರ ಗ್ರಾಮಕ್ಕೆ ಒಳಚರಂಡಿ ಕೊಳವೆ ಮಾರ್ಗ ಮತ್ತು ಸೆಪ್ಟಿಕ್ ಟ್ಯಾಂಕ್ ನಿರ್ಮಾಣದ ಕಾಮಗಾರಿಯನ್ನು ರೂ.40.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಶಾಂತವೇರಿಗೋಪಾಲಗೌಡನಗರ ಬಡಾವಣೆಯ ಆಯ್ದಭಾಗಗಳಲ್ಲಿ ರಸ್ತೆ ಮರುಡಾಂಬರೀಕರಣ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಶಾಂತವೇರಿಗೋಪಾಲಗೌಡನಗರ ಬಡಾವಣೆಯ ಹಾಸ್ಟೆಲ್ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ರೂ.15.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಚಿಕ್ಕಹಳ್ಳಿ ಗ್ರಾಮದ ಬಾಕಿ ಉಳಿದಿರುವ ಒಳಚರಂಡಿ ಕೊಳವೆ ಮಾರ್ಗ ನಿರ್ಮಾಣ ಕಾಮಗಾರಿಯನ್ನು ರೂ.20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಜೆ.ಸಿ ಬಡಾವಣೆಯಿಂದ ಹೆಲಿಪ್ಯಾಡ್ ರಸ್ತೆ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.20.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಚಿಕ್ಕಹಳ್ಳಿ ಗ್ರಾಮಕ್ಕೆ ಸೆಪ್ಟಿಕ್ ಟ್ಯಾಂಕ್ ನಿರ್ಮಾಣ ಕಾಮಗಾರಿಯನ್ನು ರೂ.40.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಲಲಿತಾದ್ರಿಪುರ ಹರಿಜನ ಕಾಲೋನಿ ಭಟ್ರು ನಾಗರಾಜು ಮನೆಯಿಂದ ಮಹದೇವ ಮನೆ ಸೇರುವ ಬೀದಿಗಳಲ್ಲಿ ಚರಂಡಿ ನಿರ್ಮಾಣ ಕಾಮಗಾರಿಯನ್ನು ರೂ.16.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಯಾಂದಹಳ್ಳಿ ಗ್ರಾಮದ ಹರಿಜನ ಕಾಲೋನಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.16.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಲಲಿತಾದ್ರಿನಗರ ಉತ್ತರ ಬಡಾವಣೆಯಲ್ಲಿ ರಾಜೀವ್‌ಗಾಂಧಿ ವಸತಿ ಬಡಾವಣೆಗಾಗಿ 18.00ಮೀಟರ್ ಅಗಲದ ರಸ್ತೆ ನಿರ್ಮಾಣ ಕಾಮಗಾರಿಯನ್ನು ರೂ.16.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಆರ್.ಟಿ.ನಗರ ಬಡಾವಣೆಯಲ್ಲಿನ ನೀರು ಸರಬರಾಜಿಗೆ ಸಂಬಂಧಿಸಿದ ಮಿಸ್ಸಿಂಗ್ ಲಿಂಕ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಆರ್.ಟಿ.ನಗರ ಬಡಾವಣೆಯಲ್ಲಿನ ಯು.ಜಿ.ಡಿಗೆ ಸಂಬಂಧಿಸಿದ ಮಿಸ್ಸಿಂಗ್ ಲಿಂಕ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಅಯ್ಯಜಯ್ಯನಹುಂಡಿ, ದಿವ್ಯ ಜ್ಯೋತಿ ಚಾರಿಟಬಲ್ ಟ್ರಸ್ಟ್, (ಸಿ.ಎ ನಿವೇಶನ)ನ ಮುಂಭಾಗದ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

- ಮೈಸೂರು ತಾ॥ ಜಯಪುರ (ಹೋ), ಮೂಗನಹುಂಡಿ ಗ್ರಾಮದಲ್ಲಿ ಬಿಟ್ಟು ಹೋಗಿರುವ ರಸ್ತೆಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿ ಹಾಗೂ ಸೆಪ್ಟಿಕ್ ಟ್ಯಾಂಕ್ ನಿರ್ಮಾಣದ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆಯಲ್ಲಿ ಓವರ್‌ಹೆಡ್ ಟ್ಯಾಂಕ್ ಮತ್ತು ಗ್ರೌಂಡ್ ಲೇವಲ್ ವಾಟರ್ ಟ್ಯಾಂಕ್ ನಿರ್ಮಿಸುವ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಗೌಸಿಯಾನಗರದ ಅರಳಿ ಕಟ್ಟೆಯಿಂದ, ಗೌಸಿಯಾನಗರ ಮಾರ್ಗವಾಗಿ ಡಾ॥ ರಾಜ್ ಕುಮಾರ್ ರಸ್ತೆ ವರೆಗೆ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಎಸ್.ಪಿ.ಕಛೇರಿಯಿಂದ (ರಿಯಾಜ್ ಹಿಂಭಾಗ) ಕೇಂದ್ರಿಯ ವಿದ್ಯಾಲಯದ ವರೆಗೆ, ಜೋಡಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ರೂ.83.33 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ. (ನೂತನ ಜಿಲ್ಲಾಧಿಕಾರಿಗಳ ಕಛೇರಿಯ ಸುತ್ತ ಮುತ್ತ ವಾಹನ ದಟ್ಟಣೆ ಹೆಚ್ಚಾಗಿರುವುದರಿಂದ)
- ಕಲ್ಯಾಣಗಿರಿ ನಗರದ ತ್ರೀವೇಣಿ ವೃತ್ತದಿಂದ ಆರ್.ಟಿ.ಓ ರಸ್ತೆಯ ಆಯ್ದ ಭಾಗಗಳ ಅಭಿವೃದ್ಧಿ ಕಾಮಗಾರಿಯನ್ನು ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಟಿ.ನರಸೀಪುರ ಮುಖ್ಯರಸ್ತೆಯಿಂದ ನಾಡನಹಳ್ಳಿ ಗ್ರಾಮದ ಪರಿಶಿಷ್ಠ ಜಾತಿ ಕಾಲೋನಿಗೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ವಾಜಮಂಗಲ ಗ್ರಾಮದ ಪರಿಶಿಷ್ಠ ಜಾತಿಯ ಕಾಲೋನಿಯಲ್ಲಿ ಒಳಚರಂಡಿ ಅಭಿವೃದ್ಧಿ ವೇಳೆ ಹಾನಿಗೊಳಗಾಗಿರುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ಹಲಗಯ್ಯನಹುಂಡಿ ಗ್ರಾಮದ ಪರಿಶಿಷ್ಠ ಜಾತಿಯ ಸ್ಮಶಾನದ ಸುತ್ತ ಕಾಂಪೌಂಡ ನಿರ್ಮಾಣ ಹಾಗೂ ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
- ವಿಜಯನಗರ 1ನೇ ಹಂತ ನಿವೇಶನ ಸಂಖ್ಯೆ.37 / ಕೆ ಯಿಂದ ಪ್ರಾಧಿಕಾರದ ಗ್ರಂಥಾಲಯದವರೆಗೆ ರಸ್ತೆ ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ರೂ.25.00 ಲಕ್ಷಗಳನ್ನು ಕಾಯ್ದಿರಿಸಿದೆ.
- ನಾಡನಹಳ್ಳಿ ಪರಿಶಿಷ್ಟ ಜಾತಿಯ ಕಾಲೋನಿಗೆ ಹೋಗುವ ಮುಖ್ಯ ರಸ್ತೆಯಿಂದ ಅಕ್ಷಯ ಮಲ್ಲಪ್ಪ ಬಡಾವಣೆಗೆ ಹೋಗುವ ಅಡ್ಡ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ರೂ.25.00 ಲಕ್ಷಗಳನ್ನು ಕಾಯ್ದಿರಿಸಿದೆ.
- ಶಕ್ತಿ ನಗರ ಉದ್ಯಾನವನ ಹಾಗೂ ವಿದ್ಯಾಶಂಕರ ಬಡಾವಣೆ ಮಾರ್ಗದಿಂದ ಹೊರ ವರ್ತುಲ ರಸ್ತೆಯ ವರೆಗೆ ಹಾಗೂ ಆರ್.ಟಿ.ಓ. ಕಛೇರಿ ಹಿಂಭಾಗದ ರಸ್ತೆ ಅಭಿವೃದ್ಧಿ ಕಾಮಗಾರಿಯ ಅಂದಾಜು ರೂ. 100 ಲಕ್ಷಗಳಾಗಿದ್ದು ಸದರಿ ಸಾಲಿನಲ್ಲಿ ರೂ. 35.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ

- ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಾದ ತಾಂಡವಪುರ, ಚಿಕ್ಕಯ್ಯನ ಛತ್ರ, ಬಂಚಳ್ಳಿ ಹುಂಡಿ, ಹೆಜ್ಜಿಗೆ, ಕೆಂಪಿಸಿದ್ದನ ಹುಂಡಿ, ಮರಳೂರು ಗೊದ್ದನಪುರ, ಹಳ್ಳಿದಿಡ್ಡಿ, ಏಚಗಹಳ್ಳಿ, ಹಳ್ಳಿಕೆರೆ ಹುಂಡಿ ಗ್ರಾಮಗಳಲ್ಲಿ ಒಳಚರಂಡಿ ವ್ಯವಸ್ಥೆ, ದುರಸ್ಥಿ ಹಾಗೂ ನಿರ್ವಹಣಾ ಕಾಮಗಾರಿಗಾಗಿ ರೂ. 50.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.
- ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಪ್ರಾಧಿಕಾರದ ಯೋಜನಾ ವ್ಯಾಪ್ತಿಯಲ್ಲಿ ಬರುವ ಉಂಡುವಾಡಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ರೂ. 25.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.
- ಹುಲಿಕೆರೆ ಗ್ರಾಮದಲ್ಲಿ ಸಮುದಾಯ ಭವನದ ನಿರ್ಮಾಣಕ್ಕಾಗಿ ರೂ. 25.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

ಒಟ್ಟಾರೆ 2020–21ನೇ ಸಾಲಿನಲ್ಲಿ ರೂ.32450.00 ಲಕ್ಷಗಳ ಅದಾಯವನ್ನು ಹಾಗೂ ರೂ.32291.52 ಲಕ್ಷಗಳ ವೆಚ್ಚವನ್ನು ಭರಿಸಲು ಉದ್ದೇಶಿಸಲಾಗಿದೆ ಹಾಗೂ ಪ್ರಸ್ತುತ ಸಾಲಿಗೆ ರೂ.158.48 ಲಕ್ಷಗಳ ಉಳಿತಾಯದ ಆಯವ್ಯಯ ಮಂಡಿಸಲಾಗಿದೆ.

ಮಾನ್ಯರೇ,

2020–21ನೇ ಸಾಲಿನ ಅಂದಾಜು ಆಯವ್ಯಯವನ್ನು ಸಭೆಯ ಮುಂದೆ ಮಂಡಿಸಿದ್ದೇನೆ. ಇದಕ್ಕೆ ಅನುಮೋದನೆ ನೀಡಬೇಕೆಂದು ಈ ಸಭೆಯನ್ನು ಕೋರುತ್ತೇನೆ.

ಈ ಆಯವ್ಯಯ ಪತ್ರವನ್ನು ಮಂಡಿಸಲು ಸಲಹೆ, ಸೂಚನೆಗಳನ್ನು ನೀಡಿದ ಮಾನ್ಯ ಅಧ್ಯಕ್ಷರು, ಗೌರವಾನ್ವಿತ ಸದಸ್ಯರುಗಳು, ಅಧಿಕಾರಿಗಳು, ಸಿಬ್ಬಂದಿ ವರ್ಗದವರಿಗೆ ಹಾಗೂ ಮಾಧ್ಯಮದ ಮಿತ್ರರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

**ಆಯುಕ್ತರು**
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು

# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

## ಆದಾಯದ ವಿವರಗಳು

| ಕ್ರ. ಸಂ. | ವಿವರಗಳು | 2019-20ನೇ ಸಾಲಿನ ಅಂದಾಜು ಆದಾಯ (ರೂ ಲಕ್ಷಗಳಲ್ಲಿ) | ಡಿಸೆಂಬರ್ 2019ರ ಅಂತ್ಯಕ್ಕೆ ವಾಸ್ತವಿಕ ಆದಾಯ (ರೂ ಲಕ್ಷಗಳಲ್ಲಿ) | ಜನವರಿ 2020 ರಿಂದ ಮಾರ್ಚ್ 2020ರ ವರೆಗೆ ನಿರೀಕ್ಷಿತ ಆದಾಯ ( ರೂ ಲಕ್ಷಗಳಲ್ಲಿ) | 2019-20ನೇ ಸಾಲಿನ ಪರಿಷ್ಕೃತ ಅಂದಾಜು ಆದಾಯ (ರೂ. ಲಕ್ಷಗಳಲ್ಲಿ) (4+5) | 2020-21ನೇ ಸಾಲಿನ ಅಂದಾಜು ಆದಾಯ (ರೂ ಲಕ್ಷಗಳಲ್ಲಿ) | ಷರಾ |
|---|---|---|---|---|---|---|---|
| 1 | 2 | 7 | 4 | 5 | 6 | 7 | 8 |
| **General Administration and master plan:**<br>**ಸಾಮಾನ್ಯ ಆಡಳಿತ ಮತ್ತು ಮಹಾಯೋಜನೆ (master plan:)** | | | | | | | |
| I | ***FUND -I***<br>ಸಾಮಾನ್ಯ ಆಡಳಿತ ಮತ್ತು ಮಹಾಯೋಜನೆ | 17100.00 | 20155.84 | 2000.00 | 22155.84 | 6300.00 | |
| II | ***FUND -II***<br>ಕೆರೆ ಸಂರಕ್ಷಣಾ ಶುಲ್ಕ | - | 308.23 | 100.00 | 408.23 | 500.00 | |
| III | ***FUND -III***<br>ಉದ್ಯಾನವನ ಮತ್ತು ತೆರೆದ ಪ್ರದೇಶಗಳಿಂದ ಶುಲ್ಕ | - | - | - | - | - | |
| IV | ***FUND -IV***<br>ಸ್ಲಂ ಸೆಸ್ | - | 38.33 | - | 38.33 | 50.00 | |
| | **ಒಟ್ಟು ವೆಚ್ಚ ರೂ.** | **17100.00** | **20502.40** | **2100.00** | **22602.40** | **6850.00** | |
| **Development Fund - I -ಅಭಿವೃದ್ಧಿ ನಿಧಿ - I** | | | | | | | |
| V | ***Development Fund - I***<br>ಅಭಿವೃದ್ಧಿ ನಿಧಿ *- I* | 21462.00 | 8400.71 | 4000.00 | 12400.71 | 20000.00 | |
| | **ಒಟ್ಟು ವೆಚ್ಚ ರೂ.** | **21462.00** | **8400.71** | **4000.00** | **12400.71** | **20000.00** | |
| **Development Fund - II -ಅಭಿವೃದ್ಧಿ ನಿಧಿ - II** | | | | | | | |
| VI | ***Development Fund - II***<br>ಅಭಿವೃದ್ಧಿ ನಿಧಿ *- II* | 2025.00 | 51.12 | 30.00 | 81.12 | 5600.00 | |
| | **ಒಟ್ಟು ವೆಚ್ಚ ರೂ.** | **2025.00** | **51.12** | **30.00** | **81.12** | **5600.00** | |
| | **ಒಟ್ಟು ವೆಚ್ಚ ರೂ.** | **40587.00** | **28954.23** | **6130.00** | **35084.23** | **32450.00** | |


**ಆಯುಕ್ತರು**
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು

# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

## ವೆಚ್ಚದ ವಿವರಗಳು

| ಕ್ರ. ಸಂ. | ವಿವರಗಳು | 2019–20ನೇ ಸಾಲಿನ ಅಂದಾಜು ವೆಚ್ಚ (ರೂ ಲಕ್ಷಗಳಲ್ಲಿ) | ಡಿಸೆಂಬರ್ 2019ರ ಅಂತ್ಯಕ್ಕೆ ವಾಸ್ತವಿಕ ವೆಚ್ಚ (ರೂ ಲಕ್ಷಗಳಲ್ಲಿ) | ಜನವರಿ 2020 ರಿಂದ ಮಾರ್ಚ್ 2020ರ ವರೆಗೆ ನಿರೀಕ್ಷಿತ ವೆಚ್ಚ ( ರೂ ಲಕ್ಷಗಳಲ್ಲಿ) | 2019–20ನೇ ಸಾಲಿನ ಪರಿಷ್ಕೃತ ಅಂದಾಜು ವೆಚ್ಚ ( ರೂ ಲಕ್ಷಗಳಲ್ಲಿ) (4+5) | 2020–21ನೇ ಸಾಲಿನ ಅಂದಾಜು ವೆಚ್ಚ (ರೂ ಲಕ್ಷಗಳಲ್ಲಿ) | ಷರಾ |
|---|---|---|---|---|---|---|---|
| 1 | 2 | 7 | 4 | 5 | 6 | 7 | 8 |
| **General Administration and master plan:**<br>**ಸಾಮಾನ್ಯ ಆಡಳಿತ ಮತ್ತು ಮಹಾಯೋಜನೆ (master plan:)** | | | | | | | |
| I | ***FUND -I***<br>ಸಾಮಾನ್ಯ ಆಡಳಿತ ಮತ್ತು ಮಹಾಯೋಜನೆ | 8689.64 | 1919.57 | 994.08 | 2913.65 | 6500.00 | |
| II | ***FUND -II***<br>ಕೆರೆ ಪುನರುಜ್ಜೀವನ | 500.00 | 52.15 | 11.20 | 63.35 | 167.00 | |
| III | ***FUND -III***<br>ಉದ್ಯಾನವನ ಮತ್ತು ತೆರೆದ ಪ್ರದೇಶಗಳ ಅಭಿವೃದ್ಧಿ | – | – | – | – | – | |
| IV | ***FUND -IV***<br>ಕೊಳಚೆ ಪ್ರದೇಶಗಳ ಅಭಿವೃದ್ಧಿ | – | – | – | – | 16.00 | |
| | ಒಟ್ಟು ವೆಚ್ಚ ರೂ. | **9189.64** | **1971.72** | **1005.28** | **2977.00** | **6683.00** | |
| **Development Fund - I -ಅಭಿವೃದ್ಧಿ ನಿಧಿ – I** | | | | | | | |
| V | ***Development Fund - I***<br>ಅಭಿವೃದ್ಧಿ ನಿಧಿ –*I* | 25248.68 | 33271.77 | 5501.17 | 38772.94 | 21554.23 | |
| | ಒಟ್ಟು ವೆಚ್ಚ ರೂ. | **25248.68** | **33271.77** | **5501.17** | **38772.94** | **21554.23** | |
| **Development Fund - II -ಅಭಿವೃದ್ಧಿ ನಿಧಿ – II** | | | | | | | |
| VI | ***Development Fund - II***<br>ಅಭಿವೃದ್ಧಿ ನಿಧಿ –*II* | 5882.65 | 169.40 | 683.77 | 853.17 | 4054.29 | |
| | ಒಟ್ಟು ವೆಚ್ಚ ರೂ. | **5882.65** | **169.40** | **683.77** | **853.17** | **4054.29** | |
| | ಒಟ್ಟು ವೆಚ್ಚ ರೂ. | **40320.97** | **35412.89** | **7190.22** | **42603.11** | **32291.52** | |

**ಆಯುಕ್ತರು**
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು


MYSORE - NANJANGUD LOCAL PLANNING AREA - 2031
PROPOSED LAND USE ANALYSIS
MYSORE URBAN DEVELOPMENT AUTHORITY, MYSORE